॥ ಓಂ ॥

ಶ್ರೀ ರಾಘವೇಂದ್ರ ಸ್ತೋತ್ರ

ವಾಕ್ಸಿದ್ದಿಗಾಗಿ ರಾಯರ ಸ್ತೋತ್ರದ ಪಠಣೆ

ಶ್ಲೋಕ–1: ಶ್ರೀಪೂರ್ಣಬೋಧಗುರುತೀರ್ಥಪಯೋಬ್ಧಿಪಾರಾ

ಕಾಮಾರಿಮಾಕ್ಷವಿಷಮಾಕ್ಷಶಿರಃಸ್ಪೃಶಂತೀ ।

ಪೂರ್ವೋತ್ತರಾಮಿತತರಂಗಚರತ್ಸುಹಂಸಾ

ದೇವಾಲಿಸೇವಿತಪರಾಂಘ್ರಿಪಯೋಜಲಗ್ನಾ ।

ಪ್ರತಿಪದಾರ್ಥ

ಶ್ರೀ = ಕಾಂತಿ, ಪೂರ್ಣಬೋಧ = ಪೂರ್ಣಜ್ಞಾನಿ, ಗುರುತೀರ್ಥ= ಶಾಸ್ತ್ರವರಿತ ಗುರುಗಳು, ಪಯೋಬ್ಧಿ = ವಿಶಾಲ ಸಮುದ್ರ, ಪಾರಾ = ದಡ, ಕಾಮ = ಕಾಮನೇ,ಅರಿ = ಶತ್ರು, ಮಾ = ಜ್ಞಾನ, ಅಕ್ಷ = ಕಣ್ಣುಗಳು, ಶಿರಃ = ತಲೆ, ಸ್ಪೃಶಂತೀ = ಸ್ಪರ್ಶಿಸುವ, ಪೂರ್ವೋತ್ತರ = ಪೂರ್ವಹಾಗೂ ಪಶ್ಚಿಮಕ್ಕೆ ಹರಡಿರುವ, ಅಮಿತ = ಮಿತಿರಹಿತ, ತರಂಗ = ಅಲೆಗಳು, ಚರತ್ = ಸಂಚರಿಸುವ, ಸು = ಉತ್ತಮ, ಹಂಸ = ಹಂಸಪಕ್ಷಿ, ದೇವಾಲಿ = ದೇವತಾ ಪಂಕ್ತಿ, ಸೇವಿತ = ಸೇವಿಸಲ್ಪಟ್ಟ, ಪರಾಂಘ್ರಿ = ನಾರಾಯಣನ ಪಾದ, ಪಯೋಜಲಗ್ನ = ಕಮಲದಲ್ಲಿ ಸೇರಿರುವ.

ದುರ್ವಾದಿ ನಿಗ್ರಹಕ್ಕಾಗಿ ರಾಯರ ಸ್ತೋತ್ರದ ಪಠಣೆ

ಶ್ಲೋಕ–2: ಜೀವೇಶಬೇಧಗುಣಪೂರ್ತಿಜಗತ್ಸುಸತ್ತ್ವ

ನೀಚೋಚ್ಚಭಾವ ಮುಖನಕ್ರಗಣೈಃ ಸಮೇತಾ ।

ದುರ್ವಾದ್ಯಜಾಪತಿಗಿಲೈರ್ಗುರುರಾಘವೇಂದ್ರ

ವಾಗ್ದೇವತಾಸರಿದಮುಂ ವಿಮಲೀಕರೋತು ।

Vishesha Sangraha

ಪ್ರತಿಪದಾರ್ಥ

ಜೀವ = ಜೀವಿಗಳು, ಈಶ = ಪರಮಪುರುಷ, ಭೇದ = ತಾರತಮ್ಯ, ಗುಣಪೂರ್ತಿ= ಗುಣಪೂರ್ಣತ್ವ, ಜಗತ್ಸುಸತ್ವ = ಪ್ರಪಂಚದ ಸತ್ಯತ್ವ, ನೀಚೋಚ್ಚಭಾವ = ತಾರತಮ್ಯ, ಮುಖ =ಮೊದಲಾದ, ನಕ್ರಗಣ್ಯೈಃ = ಹರಿತ ಹಲ್ಲುಗಳಪ್ರಾಣಿಗಳಿಂದ (ಮೊಸಳೆಯಂಥವು), ಸಮೇತಾ = ಕೂಡಿದಂಥ, ಜತೆಗೂಡಿ, ದುರ್ವಾದಿ= ಕೆಟ್ಟ ಸಿದ್ಧಾಂತಗಳನ್ನು ಹರಡುವವ, ಅಜಾಪತಿ = ಮೇಕೆಗಳ ಆಧಿಪತಿ, ಗಿಲ = ಪ್ರಾಣಿಗಳಿಂದ ಕೂಡಿದ, ಗುರು ರಾಘವೇಂದ್ರ = ಗುರುಗಳಾದಂತ ರಾಘವೇಂದ್ರರ, ವಾಕ್ = ಧ್ವನಿ, ಮಾತು, ದೇವತಾ ಸರಿತ್ = ದೇವ ನದಿ, ಆಮುಂ = ನನ್ನನ್ನು, ವಿಮಲೀಕರೋತು = ನಿರ್ಮಲನನ್ನಾಗಿಸಲಿ.

ಅನುವಾದ : ಮೊದಲಿನ ಎರಡು ಶ್ಲೋಕಗಳಲ್ಲಿ ಸ್ತೋತ್ರಕರ್ತರು (ಶ್ರೀ ಅಪ್ಪಣ್ಣಾಚಾರ್ಯರು) ಇಷ್ಟದೇವತಾ ಗುರುನಮಸ್ಕಾರ ಮಾಡಿ ಗ್ರಂಥ ರಚನೆಗಾಗಿ ಮನೋನೈರ್ಮಲ್ಯಕ್ಕಾಗಿ ಪ್ರಾರ್ಥಿಸುತ್ತಾರೆ. ಗಂಗಾ ನದಿಯ ಪ್ರವಾಹದಂತೆ ಅಸ್ಖಲಿತವಾದ, ಶ್ರೀರಾಯರ ವಾಣಿಯು ನನ್ನನ್ನು ಅಂದರೆ ನನ್ನ ಮನಸ್ಸನ್ನು ಪವಿತ್ರಗೊಳಿಸಲಿ ಶ್ರೀರಾಯರ ವಾಣಿಯು ಶ್ರೀಪೂರ್ಣಪ್ರಜ್ಞರಾದ ಶ್ರೀಮಧ್ವಚಾರ್ಯರೆಂಬ ಗುರುಗಳ ಶಾಸ್ತ್ರವನ್ನೇ ಅನುಸರಿಸಿ ಇರುತ್ತದೆ. ಶ್ರೀರಾಯರ ವಾಣಿಯು ಕಾಮಾದ್ಯರಿಷಡ್ವರ್ಗಗಳನ್ನು ಜಯಿಸಿದ ಜ್ಞಾನೇಂದ್ರಿಯವುಳ್ಳಂಥ, ಪ್ರತ್ಯಕ್ಷ, ಅನುಮಾನ, ಹಾಗೂ ಆಗಮಗಳೆಂಬ ಮೂರು ಪ್ರಮಾಣಗಳನ್ನು ಒಪ್ಪುವ ಪಂಡಿತರಿಂದ ತಲೆದೂಗಿ ಮಾನ್ಯ ಮಾಡಲ್ಪಟ್ಟಿದೆ. ಪೂರ್ವಪಕ್ಷ ಹಾಗೂ ಸಿದ್ಧಾಂತ ಎಂಬ ವಾದಪದ್ಧತಿಯಲ್ಲಿ ವಿಹರಿಸುವ ಪರಮಹಂಸರು ಶ್ರೀರಾಯರ ವಾಣಿಯನ್ನೇ ಅವಲಂಬಿಸುತ್ತಾರೆ. ದೇವತೆಗಳಿಂದ ಸದಾ ಸ್ತುತಿಸುವದು ಶ್ರೀರಾಯರ ವಾಣಿಯ ವೈಶಿಷ್ಟವಾಗಿದೆ. ಜೀವನಿಗೂ ಪರಮಾತ್ಮನಿಗೂ ಭೇದವಿದೆ, ಪರಮಾತ್ಮನು ಸರ್ವಗುಣ ಪರಿಪೂರ್ಣನಾಗಿದ್ದಾನೆ, ಈ ಜಗತ್ತು

Vishesha Sangraha

ಸತ್ಯವಾಗಿದೆ. ಜೀವರಾಶಿಯಲ್ಲಿ ನೀಚ-ಉಚ್ಚ ಎಂಬ ತಾರತಮ್ಯವಿದೆ ಪಂಚಭೇದವು ಸತ್ಯಭೂತವಾದ ಎಂಬಂತಹ ಶ್ರೀಮಧ್ವ ಸಿದ್ಧಾಂತವನ್ನೇ ಶ್ರೀರಾಯರ ವಾಣಿಯು ಭೋದಿಸುತ್ತದೆ. ಶ್ರೀರಾಯರ ವಾಣಿಯು ದುರ್ವಾದಿಗಳ ವಾದಗಳಲ್ಲಿ ಸೋಲಿಸಿ ನುಂಗಿಬಿಡುತ್ತದೆ. ಅಂತಹ ಶ್ರೀರಾಯರ ವಾಣಿಯು ನಮ್ಮನ್ನು ಪವಿತ್ರಗೊಳಿಸಲಿ.

ಪಾಪ ಪರಿಹಾರಕ್ಕಾಗಿ ಪ್ರಾರ್ಥನೆ

ಶ್ಲೋಕ-3: ಶ್ರೀ ರಾಘವೇಂದ್ರಃ ಸಕಲಪ್ರದಾತಾ

ಸ್ವಪಾದಕಂಜದ್ವಯಭಕ್ತಿಮದ್ಭ್ಯಃ ।

ಅಘಾದ್ರಿಸಂಭೇದನದೃಷ್ಟಿವಜ್ರಃ

ಕ್ಷಮಾಸುರೇಂದ್ರೋಽವತು ಮಾಂ ಸದಾಽಯಮ್ ।

ಪ್ರತಿಪದಾರ್ಥ

ಸಕಲ = ಪ್ರತಿಯೊಂದು, ಪ್ರದಾತಾ = ಅನುಗ್ರಹಿಸುವರು, ಸ್ವ = ತಮ್ಮ, ಪಾದಕಂಜದ್ವಯ = ಎರಡು ಪಾದಕಮಲಗಳಲ್ಲಿ, ಭಕ್ತಿಮದ್ಭ್ಯಃ = ಭಕ್ತಿಉಳ್ಳವರಿಗೆ, ಅಘ = ಪಾಪಗಳ, ಅದ್ರಿ = ಪರ್ವತ, ಸಂಭೇದನ = ಛಿದ್ರಗೊಳಿಸುವುದರಲ್ಲಿ, ನಾಶಮಾಡು; ದೃಷ್ಟಿವಜ್ರಃ = ವಜ್ರದಂಥ ದೃಷ್ಟಿ ಹೊಂದಿದವರು, ಕ್ಷಮಾ = ಭೂಮಿ, ಸುರ = ದೇವತೆಗಳಿಗೆ, ಇಂದ್ರಃ = ಅಧಿಪತಿಗಳಾದ ರಾಘವೇಂದ್ರಸ್ವಾಮಿಗಳು, ಸದಾ = ನಿರಂತರ, ಮಾಂ= ನನ್ನನ್ನು, ಅವತು = ರಕ್ಷಣೆ ಮಾಡಲಿ.

ಅನುವಾದ : ಶ್ರೀ ರಾಘವೇಂದ್ರತೀರ್ಥರು ತಮ್ಮ ಪಾದಕಮಲಗಳಲ್ಲಿ ಭಕ್ತಿ ಮಾಡುವವರಿಗೆ ಸಕಲ ಅಭೀಷ್ಟಗಳನ್ನೂ ದಯಪಾಲಿಸುತ್ತಾರೆ. ಕರುಣಾಸಾಗರರಾದ ಗುರುರಾಜರು ತಮ್ಮ ದರ್ಶನ ವಂದನಾದಿಗಳಿಗೆ ಬಂದ ಭಕ್ತ ಜನರನ್ನು ಉದ್ಧಾರ ಮಾಡಬೇಕೆಂಬ ಇಚ್ಛೆಯಿಂದ

Vishesha Sangraha

ಪರ್ವತಪ್ರಾಯವಾದ ಅವರ ಪಾಪರಾಶಿಯನ್ನು ತಮ್ಮ ಕಟಾಕ್ಷ ಮಾತ್ರದಿಂದಲೇ, ವಜ್ರಾಯುಧವು ಪರ್ವತಗಳನ್ನು ಸೀಳಿ ಧ್ವಂಸಮಾಡುವಂತೆ ನಾಶ ಮಾಡುತ್ತಾರೆ. ಭೂ ಸುರೇಂದ್ರರು ಶ್ರೇಷ್ಠರಾಗಿದ್ದಾರೆ. ಅಂತಹ ಶ್ರೀರಾಯರು ನನ್ನನ್ನು ಯಾವಾಗಲೂ ರಕ್ಷಿಸಲಿ.

ಇಷ್ಟಸಿದ್ಧಿಗಾಗಿ ಪ್ರಾರ್ಥನೆ

ಶ್ಲೋಕ–4: ಶ್ರೀ ರಾಘವೇಂದ್ರೋ ಹರಿಪಾದಕಂಜ
ನಿಷೇವಣಾಲ್ಲಬ್ಧ ಸಮಸ್ತಸಂಪತ್ ।
ದೇವಸ್ವಭಾವೋ ದಿವಿಜದ್ರುಮೋಽಯ ।
ಇಷ್ಟಪ್ರದೋ ಮೇ ಸತತಂ ಸ ಭೂಯಾತ್ ।

ಪ್ರತಿಪದಾರ್ಥ

ಶ್ರೀ ರಾಘವೇಂದ್ರಃ = ಶ್ರೀ ರಾಘವೇಂದ್ರರು, ಹರಿ= ಪರಮದೇವ, ಪಾದಕಂಜ = ಪಾದಕಮಲ, ನಿ = ತೀವ್ರವಾಗಿ, ಸೇವನಾತ್ = ಸೇವೆಯಿಂದ, ಲಬ್ಧ = ಲಭಿಸಿದ, ಸಮಸ್ತ = ಸಕಲ, ಸಂಪತ್ = ಐಶ್ವರ್ಯವುಳ್ಳವರು, ದೇವಸ್ವಭಾವಃ = ದೇವತಾಸ್ವರೂಪ, ದಿವಿ = ಆಕಾಶ, ಜ = ಜನಿಸಿದ, ದ್ರುಮ = ಕಲ್ಪವೃಕ್ಷದಂತೆ, ಮೇ = ನನಗೆ, ಇಷ್ಟಪ್ರದಃ = ಸಕಲ ಅಭೀಷ್ಟವನ್ನು ಈಡೇರಿಸುವವರು, ಸತತಮ್ = ನಿರಂತರವಾಗಿ, ಭೂಯಾತ್ = ಆಗಲಿ.

ಅನುವಾದ: ಸರ್ವೋತ್ತಮನಾದ ಶ್ರೀಮನ್ನಾರಾಯಣನ ಸೇವೆಯನ್ನು ವಿಶೇಷವಾಗಿ ಮಾಡಿದ್ದರಿಂದ ಗುರುರಾಯರು ಭಕ್ತರ ಪಾಪ ಪರಿಹಾರ ಮಾಡುವ ಸಾಮರ್ಥ್ಯವನ್ನೂ, ಭಕ್ತರ ಇಷ್ಟಾರ್ಥವನ್ನು ಸಲ್ಲಿಸುವ ಸಾಮರ್ಥ್ಯವನ್ನು ಪಡೆದಿದ್ದಾರೆ. ಇವರು ದೇವತಾ ಸ್ವರೂಪರು, ಕಲ್ಪವೃಕ್ಷದಂತೆ ಅಭೀಷ್ಟಪ್ರದಾತೃಗಳು. ಅವರ ನಿರಂತರದಲ್ಲಿಯೂ ನನಗೆ ಇಷ್ಟಾರ್ಥಪ್ರದರಾಗಲಿ ಎಂದು ಪ್ರಾರ್ಥಿಸಿದ್ದಾರೆ.

Vishesha Sangraha

ದುಃಖ ನಿವಾರಣೆಗಾಗಿ ಪ್ರಾರ್ಥನೆ

ಶ್ಲೋಕ–5 : ಭವ್ಯಸ್ವರೂಪೋ ಭವದುಃಖತೂಲ ।

ಸಂಘಾಗ್ನಿಚರ್ಯಃ ಸುಖಧೈರ್ಯಶಾಲೀ ।

ಸಮಸ್ತದುಷ್ಟಗ್ರಹನಿಗ್ರಹೇಶೋ

ದುರತ್ಯಯೋಪಪ್ಲವಸಿಂಧುಸೇತುಃ ।

ಪ್ರತಿಪದಾರ್ಥ

ಭವ್ಯ = ಬಹು ಆಕರ್ಷಕ, ಸ್ವರೂಪಃ = ನೋಟ, ಸ್ವಭಾವವುಳ್ಳವರು, ಭವ = ಭೂಲೋಕ ಜೀವನದ, ದುಃಖ = ಅಡೆತಡೆಗಳು, ಸಮಸ್ಯಗಳೆಂಬ, ಸ್ಥೂಲಸಂಘ = ಹುಲ್ಲಿನ ರಾಶಿಗೆ, ಅಗ್ನಿಚರ್ಯ = ಅಗ್ನಿಯಂತೆ ನಡವಳಿಕೆ ಹೊಂದಿದವರು, ಸುಖ= ಆನಂದ, ಧೈರ್ಯಶಾಲೀ = ಧೈರ್ಯವಂತರು, ಸಮಸ್ತ = ಸಕಲ, ದುಷ್ಟ = ಹಾನಿಕಾರಕ, ಗ್ರಹ = ಪಿಶಾಚಾದಿ, ನಿಗ್ರಹೇಶಃ = ನಿಗ್ರಹ ಮಾಡುವವರು, ದುರತ್ಯಯ = ಮೀರಲು ಅಸಾಧ್ಯವಾದ, ಉಪಪ್ಲವ = ಆಳವಾಗಿ ಪೀಡಿಸುವ ಸಮಸ್ಯೆಗಳು, ಸಿಂಧು = ವಿಶಾಲ ಸಾಗರ, ಸೇತುಃ = ಸೇತುವೆಯಂತೆ ಇರತಕ್ಕವರು.

ನಮ್ಮ ಶತ್ರುಗಳ ವಾಕ್ ಬಂಧನ

ಶ್ಲೋಕ–6 : ನಿರಸ್ತದೋಷೋ ನಿರವದ್ಯವೇಷಃ

ಪ್ರತ್ಯರ್ಥಿಮೂಕತ್ವ ನಿದಾನಭಾಷಃ ।

ವಿದ್ವತ್ಪರಿಜ್ಞೇಯ ಮಹಾವಿಶೇಷೋ

ವಾಗ್ವೈಖರೀನಿರ್ಜಿತ ಭವ್ಯಶೇಷಃ ।

Vishesha Sangraha

ಪ್ರತಿಪದಾರ್ಥ

ನಿರಸ್ತದೋಷಃ = ಚ್ಯುತಿರಹಿತರು, ನಿರವದ್ಯ = ದೋಷರಹಿತ, ವೇಷಃ = ವೇಷ ವುಳ್ಳವರು, ಪ್ರತ್ಯರ್ಥಿ = ಪ್ರತಿಸ್ಪರ್ಧಿಗಳಿಗೆ, ಮೂಕತ್ವ = ಮಾತುಬಾರದಂತಾಗಲು, ನಿದಾನ = ಕಾರಣವಾದ, ಭಾಷಃ = ಜಾಣನುಡಿವುಳ್ಳವರು, ವಿದ್ವತ್ = ವಿದ್ವಾಂಸರಿಂದ, ಪರಿಜ್ಞೇಯ = ತಿಳಿಯಲ್ಪಡುವ, ಮಹಾ = ಅತ್ಯಂತವಾದ, ವಿಶೇಷಃ = ವಿಶೇಷವುಳ್ಳವರು, ವಾಗ್ವೈಖರಿ = ಚರ್ಚಾ ಪ್ರವೀಣ, ನಿರ್ಜಿತ = ಸೋಲಿಸಲ್ಪಟ್ಟ, ಭವ್ಯ = ಕುಶಲ, ಶೇಷ = ಶೇಷನೆಂಬ ವಾದಿ

ಸಕಲ ರೋಗಗಳ ಪರಿಹಾರ

ಶ್ಲೋಕ–7: ಸಂತಾನ ಸಂಪತ್ಪರಿಶುದ್ಧ ಭಕ್ತಿ ।

ವಿಜ್ಞಾನವಾಗ್ದೇಹ ಸುಪಾಟವಾದೀನ್ ದತ್ವಾ ।

ಶರೀರೋತ್ಥ ಸಮಸ್ತದೋಷಾನ್ ಹತ್ವಾ

ಸ ನೋಽವ್ಯಾದ್ಗುರುರಾಘವೇಂದ್ರಃ ।

ಪ್ರತಿಪದಾರ್ಥ

ಸಂತಾನ = ಸಂತತಿ, ಸಂಪತ್ = ಐಶ್ವರ್ಯ, ಪರಿಶುದ್ಧ = ತುಂಬ ಶುದ್ಧವಾದ, ಭಕ್ತಿ = ಭಕ್ತಿ, ವಿಜ್ಞಾನ = ಶ್ರೇಷ್ಠ ಜ್ಞಾನ, ವಾಗ್ದೇಹ = ವಾಣಿ ಶರೀರ, ಸುಪಾಟವ = ಶೋಭನವಾದ ಪಟುತ್ವ, ಆದೀನ್ = ಮೊದಲಾದ ಎಲ್ಲವನ್ನೂ, ದತ್ವಾ = ಅನುಗ್ರಹಿಸಿ, ಶರೀರೋತ್ಥಾನ್ = ಶರೀರದೊಳಗೆ ಹುಟ್ಟುವ, ಸಮಸ್ತ ದೋಷಾನ್ = ಸಮಸ್ತ ದೋಷವೆಲ್ಲವು, ಹತ್ವಾ = ಪರಿಹಾರ ಮಾಡಿ, ಸಹ= ನಾವು, ಸ = ಇಂಥ, ಗುರು ರಾಘವೇಂದ್ರಃ = ರಾಘವೇಂದ್ರ ಗುರುಗಳು, ಅವ್ಯಾತ್ = ರಕ್ಷಣೆ ಮಾಡಲಿ.

ಶ್ಲೋಕ–5,6,7

ಅನುವಾದ: ಶ್ರೀ ರಾಘವೇಂದ್ರರು ಮಂಗಳಕರವಾದ ಸ್ವರೂಪ ವುಳ್ಳವರು. ಜನನ–ಮರಣ ರೂಪವಾದ ಈ ಸಂಸಾರದಲ್ಲಿರುವ ದುಃಖ–ವ್ಯಸನಗಳೆಂಬ ಹತ್ತಿಯ ರಾಶಿಗೆ ಅಗ್ನಿಸದೃಶರಾಗಿದ್ದಾರೆ.

Vishesha Sangraha

ಆನಂದ, ನಿರ್ವಿಕಾರಸ್ವಭಾವ ಇವುಗಳಿಂದ ಶೋಭಿಸುವ ಇವರು ಎಲ್ಲಾ ನೀಚವಾದ ಗ್ರಹಪಿಶಾಚಾದಿಗಳ ನಿಗ್ರಹ ಮಾಡುವ ಸಾಮರ್ಥ್ಯವುಳ್ಳವರು. ದಾಟಲು ಅಸಾಧ್ಯವಾದ ಉಪದ್ರವಗಳೆಂಬ ಸಮುದ್ರಕ್ಕೆ ಸೇತುವಿನಂತಿರುವ ಇವರು ರಾಗಾದಿ ದೋಷಗಳಿಂದ ದೂರರಾಗಿದ್ದಾರೆ. ಇವರು ಪ್ರತಿವಾದಿಗಳನ್ನು ತಮ್ಮ ವಾಣಿಯಿಂದ ನಿರುತ್ತರರನ್ನಾಗಿ ಮಾಡುತ್ತಾರೆ. ಇವರು ಮಹಾಮಹಿಮೆ ಜ್ಞಾನಿಗಳಿಗೆ ಮಾತ್ರವೇ ಗೋಚರವು, ಇವರು ತಮ್ಮ ವಾಗ್ವಿಲಾಸದಿಂದ ಸಮಸ್ತ ದುರ್ವಾದಿಗಳನ್ನು ಜಯಿಸಿದ್ದಾರೆ. ತಮ್ಮ ಪರಮಗುರುಗಳಾದ ವಿಜಯೀಂದ್ರತೀರ್ಥರು ಮಾಡಿರುವ “ವಾಗ್ ವೈಖರೀ” ಎಂಬ ಗ್ರಂಥವನ್ನು ಆಧಾರವಾಗಿಟ್ಟುಕೊಂಡು ಶೇಷನೆಂಬ ಕುಶಲ ವಾದಿಯನ್ನು ಜಯಿಸಿದ್ದಾರೆ. ಇಂತಹ ಶ್ರೀರಾಘವೇಂದ್ರಸ್ವಾಮಿಗಳು ನಮಗೆ ಸಂತಾನ, ಸಂಪತ್ತು, ಪರಿಶುದ್ಧವಾದ ಹರಿ–ಗುರು ಭಕ್ತಿ, ವಿಶೇಷ ಜ್ಞಾನ, ವಾಕ್ಪಟುತ್ವ, ದೇಹದಾರ್ಢ್ಯ ಇವೇ ಮೊದಲಾದವುಗಳನ್ನು ಕೊಟ್ಟು ದೇಹದಲ್ಲಿರುವ ಸಮಸ್ತ ದೋಷಗಳನ್ನು ನಾಶಮಾಡಿ ನಮ್ಮನ್ನು ಕಾಪಾಡಲಿ ಎಂದು ಪ್ರಾರ್ಥನೆ ಮಾಡಿದ್ದಾರೆ.

ಪುತ್ರ ಪ್ರಾಪ್ತಿ ಹಾಗೂ ತಾಪತ್ರಯ ಪರಿಹಾರ

ಶ್ಲೋಕ–8 :

ಯತ್ಪಾದೋದಕ ಸಂಚಯಃ ಸುರನದೀ ಮುಖ್ಯಾಪಗಾಸಾದಿತಾ
ಸಂಖ್ಯಾನುತ್ತಮಪುಣ್ಯಸಂಘವಿಲಸತ್ ಪ್ರಖ್ಯಾತಪುಣ್ಯಾವಹಃ ।
ದುಸ್ತಾಪತ್ರಯನಾಶನೋ ಭುವಿ ಮಹಾವಂಧ್ಯಾಸುಪುತ್ರಪ್ರದೋ
ವ್ಯಂಗಸ್ವಂಗಸಮೃದ್ಧಿದೋ ಗ್ರಹಮಹಾಪಾಪಾಪಹಸ್ತಂ ಶ್ರಯೇ ॥

Vishesha Sangraha

ಪ್ರತಿಪದಾರ್ಥ :

ಯತ್ = ಯಾರ, ಪಾದೋದಕ = ಪಾದಪ್ರಕ್ಷಾಲನೆ ಮಾಡುವ ನೀರಿನ, ಸಂಚಯಃ = ಸಮೂಹ, ಸುರನದೀ = ಗಂಗೆಯೇ, ಮುಖ್ಯ = ಪ್ರಧಾನ, ಅಪಗಾ = ನದಿಗಳಿಂದ, ಅಸಾದಿತಾ = ದೊರಕಿದ, ಅಸಂಖ್ಯಾನ್ = ಅಗಣಿತ, ಅನುತ್ತಮ = ಹೋಲಿಸಲಾಗದ ಉತ್ತಮತೆ, ಪುಣ್ಯ ಸಂಘ = ಅರ್ಜಿತ ಪುಣ್ಯ ಸಮೂಹವೇ, ವಿಲಸತ್ = ಪ್ರಕಾಶಮಾನ, ಪ್ರಖ್ಯಾತ = ಪ್ರಸಿದ್ಧ, ಪುಣ್ಯ = ಸುಕೃತ, ಆವಹಃ = ತಂದುಕೊಡುತ್ತದೋ, ದುಸ್ತಾಪತ್ರಯ = ಹಾನಿಕರ ಸಮಸ್ಯಗಳು, ನಾಶನಃ = ದಮನಗೊಳಿಸುವದೋ, ಭುವಿ = ಭೂಮಿಯಲ್ಲಿ, ಮಹಾ ವಂಧ್ಯಾ = ಬಂಜೆ, ಸುಪುತ್ರಪ್ರದೋ = ಸಂತಾನಶಕ್ತಿ ಅನುಗ್ರಹಿಸುವುದೋ, ವ್ಯಂಗಸ್ವಂಗ = ಅಂಗವಿಕಲರು, ಸಮೃದ್ಧಿದೋ = ಉತ್ತಮ ಆರೋಗ್ಯಪಡೆಯುವಂತೆ ಮಾಡುವುದೋ, ಗ್ರಹ = ಆಕಾಶಕಾಯ, ಮಹಾಪಾಪ = ದೊಡ್ಡವಸ್ತ್ರ, ಅಪಹಃ = ಪರಿಹರಿಸುವುದೋ, ತಮ್ ಶ್ರಯೇ = ಅಂತಹ ರಾಘವೇಂದ್ರರನ್ನು ಆಶ್ರಯಿಸುತ್ತೇನೆ.

ಅನುವಾದ : ಶ್ರೀ ರಾಘವೇಂದ್ರಸ್ವಾಮಿಗಳ ಪಾದೋದಕದ ಸಂಗ್ರಹವು ದೇವತೆಗಳ ನದಿಯಾದ ಗಂಗೆಯಂತೆ ಅತ್ಯಂತ ಪುಣ್ಯಪ್ರದವೂ ಪಾಪನಾಶಕವೂ ಆಗಿದೆ. ಶ್ರೀರಾಯರ ಪಾದೋದಕದ ಸೇವನೆಯು ಅಸಂಖ್ಯವಾದ ಹಾಗೂ ಅತ್ಯುತ್ತಮವಾದ ಪುಣ್ಯರಾಶಿಗೆ ಸಮಾನವಾದ ಪ್ರಸಿದ್ಧವಾದ ಪುಣ್ಯರಾಶಿಯನ್ನು ದಯಪಾಲಿಸುತ್ತದೆ. ಈ ಪಾದೋದಕವು ಆಧಿಭೌತಿಕ, ಆಧಿದೈವಿಕ ಹಾಗೂ ಆಧ್ಯಾತ್ಮಿಕ ಎಂಬ ಮೂರು ವಿಧವಾದ ದುಷ್ಟವಾದ ತಾಪಗಳನ್ನು ನಾಶಮಾಡುತ್ತದೆ. ಇವರ ಪಾದೋದಕ ಸೇವನೆಯಿಂದ ಈ ಜಗತ್ತಿನಲ್ಲಿ ಮಹಾವಂಧ್ಯೆಯಾದ ಸ್ತ್ರೀಯೂ ಸತ್ಪುತ್ರನನ್ನು ಹೊಂದುವಳು. ಎಂಥಾ ಅಂಗವಿಹೀನರಿಗೂ ಒಳ್ಳೆಯ ಅಂಗಗಳ ಸಮೃದ್ಧಿಯನ್ನು

Vishesha Sangraha

ದಯಪಾಲಿಸುತ್ತದೆ ಶ್ರೀ ರಾಯರ ಪಾದೋದಕ ಹಾಗೂ ಪಾದೋದಕದಿಂದ ಮಹಾದುಷ್ಟಗ್ರಹಗಳ ದುಷ್ಪರಿಣಾಮಗಳು ನಷ್ಟವಾಗುತ್ತವೆ. ಇಂತಾ ಅದ್ಭುತ ಸಾಮರ್ಥ್ಯವುಳ್ಳ ಶ್ರೀರಾಯರನ್ನು ನಾನು ಆಶ್ರಯಿಸುತ್ತೇನೆ, ಸೇವಿಸುತ್ತೇನೆ.

ರಾಯರ ಭಕ್ತರ ದರ್ಶನದಿಂದ ದುರಿತ/ಪಾಪ ನಿವಾರಣೆ

ಶ್ಲೋಕ–9: ಯತ್ಪಾದಕಂಜರಜಸಾ ಪರಿಭೂಷಿತಾಂಗಾಃ ।

ಯತ್ಪಾದಪದ್ಮಮಧುಪಾಯಿತಮಾನಸಾ ಯೇ ।

ಯತ್ಪಾದಪದ್ಮಪರಿಕೀರ್ತನಜೀರ್ಣವಾಚಃ ।

ತದ್ದರ್ಶನಂ ದುರಿತಕಾನನದಾವಭೂತಮ್ ।

ಪ್ರತಿಪದಾರ್ಥ

ಯತ್ಪಾದ = ಯಾವ ರಾಘವೇಂದ್ರ ಗುರುಗಳ ಪಾದ, ಕಂಜ = ಪದ್ಮಗಳ, ರಜಸಾ = ಧೂಳಿನಿಂದ, ಪರಿಭೂಷಿತಾಂಗಾ = ಅತ್ಯಂತ ಅಲಂಕೃತವಾದ ಶರೀರವುಳ್ಳವರು, ಯತ್ಪಾದಪದ್ಮ = ಯಾರ ಪಾದಕಮಲ, ಮಧುಪಾಯಿತ = ದುಂಬಿಯಂತೆ ಹಾರುವ, ಮಾನಸಾಃ = ಮನಸ್ಸುಳ್ಳವರು, ಯತ್ಪಾದಪದ್ಮ ಪರಿಕೀರ್ತನಜೀರ್ಣವಾಚಃ = ಗುಣಕೀರ್ತನ ಮಾಡುತ್ತ ತಮ್ಮ ವಾಣಿಯನ್ನು ವೈಭವೀಕರಿಸುವ, ಯೇ = ಯಾರು, ತತ್‌ದರ್ಶನಮ್ = ಇಂಥಹ ಭಕ್ತರ ದರ್ಶನವು, ದುರಿತ = ಆತಂಕಗಳು, ಕಾನನ = ಕಾಡು, ದಾವಭೂತಮ್ = ಸುಡುವ ಬೆಂಕಿಯಂತಿದೆ.

ಅನುವಾದ : ಶ್ರೀ ರಾಘವೇಂದ್ರಸ್ವಾಮಿಗಳ ಪಾದಕಮಲಗಳನ್ನು ವಂದಿಸಿ, ಅವುಗಳ ಧೂಳಿನಿಂದ ಅಲಂಕೃತವಾದ ಅಂಗಾಂಗ ಗಳುಳ್ಳವರೂ, ದುಂಬಿಯು ಕಮಲದಲ್ಲಿಯೇ ಆಸಕ್ತವಾಗಿರುವಂತೆ ಶ್ರೀರಾಯರ ಪಾದಕಮಲದ ಸ್ಮರಣೆಯನ್ನು ನಿರಂತರ

Vishesha Sangraha

ಮಾಡುತ್ತಿರುವವರೂ, ಅಲ್ಲದೆ ಗುರುಗಳ ಶ್ರೀಪಾದಪದ್ಮಗಳ ಸಂಕೀರ್ತನೆ ಮಾಡುವುದರಿಂದ ಪರಿಶುದ್ಧವಾದ ಮಾತುಳ್ಳವರೂ ಪರಮಸಾತ್ವಿಕರಾದ ಭಕ್ತರ ದರ್ಶನ ಮಾತ್ರದಿಂದಲೇ ಸಮಸ್ತ ಪಾಪಗಳು ನಾಶವಾಗುತ್ತವೆ.

ಶ್ರೀರಾಯರ ಭಕ್ತರ ದರ್ಶನವೇ ದುರಿತಕಾನನಕ್ಕೆ ಕಾಡ್ಗಿಚ್ಚಿನಂತೆ ಪಾಪರಾಶಿಯನ್ನು ಸುಡುತ್ತದೆಂದು, ಹೇಳಿದ ಮೇಲೆ ರಾಯರ ದರ್ಶನವು ಸಹ ದುರಿತಕಾನನದಾವಾಗ್ನಿಯೇ ಆಗಿದೆ.

ಸರ್ವ ಶಾಸ್ತ್ರಗಳ ಸಿದ್ಧಿ

ಶ್ಲೋಕ–10: ಸರ್ವತಂತ್ರಸ್ವತಂತ್ರೋಽಸೌ ಶ್ರೀ ಮಧ್ವಮತವರ್ಧನಃ ।

ವಿಜಯೀಂದ್ರಕರಾಬ್ಜೋತ್ಥ ಸುಧೀಂದ್ರ ವರಪುತ್ರಕಃ ।

ಪ್ರತಿಪದಾರ್ಥ

ಸರ್ವ = ಸಕಲ, ತಂತ್ರ = ಶಾಸ್ತ್ರ, ಸ್ವತಂತ್ರಃ = ಆಳವಾದ ಜ್ಞಾನವುಳ್ಳ, ಅಸೌ = ತಾವು, ಶ್ರೀ ಮಧ್ವಮತ = ಮಧ್ವಪರಂಪರೆ, ವರ್ಧನಃ = ವ್ಯಾಪಕಗೊಳಿಸಿದ, ವಿಜಯೀಂದ್ರ ಕರಾಬ್ಜೋತ್ಥ = ವಿಜಯೀಂದ್ರ ತೀರ್ಥರಿಂದ ಆಯ್ಕೆಯಾಗಿ ಉತ್ಪನ್ನರಾದ, ಸುಧೀಂದ್ರ ವರಪುತ್ರಕಃ = ಶ್ರೀ ಸುಧೀಂದ್ರ ತೀರ್ಥರ ಮೆಚ್ಚಿನ ಶಿಷ್ಯರಾದ.

ಸಂಪತ್ತು ಹಾಗೂ ಆಯುಷ್ಯ ಅಭಿವೃದ್ಧಿ

ಶ್ಲೋಕ–11:

ಶ್ರೀ ರಾಘವೇಂದ್ರೋ ಯತಿರಾಟ್ ಗುರುರ್ಮೇಸ್ಯಾದ್ಭಯಾಪಹಃ

ಜ್ಞಾನ ಭಕ್ತಿ ಸುಪುತ್ರಾಯುಃ ಯಶಃ ಶ್ರೀ ಪುಣ್ಯವರ್ಧನಃ ।

Vishesha Sangraha

ಪ್ರತಿಪದಾರ್ಥ

ಯತಿರಾಟ್ = ಯತಿಶ್ರೇಷ್ಠರಾದ, ಶ್ರೀ ರಾಘವೇಂದ್ರಃ = ಶ್ರೀ ರಾಘವೇಂದ್ರ ಗುರುಗಳು, ಪರಮಹಂಸರಾದ, ಭಯಾಪಹಃ = ಸಕಲ ಭಯ ನಿವಾರಕರು, ಜ್ಞಾನ ಭಕ್ತಿ ಸುಪುತ್ರಾಯುಃ = ಜ್ಞಾನ ಭಕ್ತಿ ಸುಪುತ್ರ ಆಯುಸ್ಸು, ಯಶಃ = ಕೀರ್ತಿ, ವರ್ಧನ = ಬಹುಪಾಲು ವರ್ಧಿಸಿ, ಸ್ಯಾತ್ = ನನಗೆ ಅನುಗ್ರಹಿಸಲಿ.

ಶ್ಲೋಕ–10,11 ಅನುವಾದ : ಶ್ರೀ ಗುರುರಾಯರು ಸಕಲ ಶಾಸ್ತ್ರಗಳಲ್ಲಿಯೂ ಫಲಾಪೇಕ್ಷೆ ಇಲ್ಲದೆ ಅಸಮಾನ ಪಂಡಿತರು, ವೇದಶಾಸ್ತ್ರ ಸಂಪನ್ನರಾದ ಶ್ರೀ ಮಧ್ವಾಚಾರ್ಯರ ಮೋಕ್ಷಾದಿ ಸಂಪತ್‌ಪ್ರದವಾದ ಸಿದ್ಧಾಂತವನ್ನು ಟಿಪ್ಪಣ್ಯಾದಿಗಳ ದ್ವಾರ ಹಾಗು ಶಿಷ್ಯೋಪದೇಶದಿಂದ ವೃದ್ಧಿ ಹೊಂದಿಸಿದವರು. ಶ್ರೀವಿಜಯೀಂದ್ರರ ಶಿಷ್ಯರಾದ ಶ್ರೀ ಸುಧೀಂದ್ರರಿಂದ ಆಶ್ರಮವನ್ನು ಪಡೆದವರು. ಅವರು ಭಕ್ತರಿಗೆ ಜ್ಞಾನವನ್ನು, ಭಕ್ತಿಯನ್ನು, ಐಶ್ವರ್ಯವನ್ನು ಸುಕೃತವನ್ನೂ ಕರುಣಿಸುತ್ತಾರೆ. ಯತಿಕುಲತಿಲಕರಾದ ಶ್ರೀ ರಾಘವೇಂದ್ರರೆಂಬ ಪರಮಹಂಸರು ಭಕ್ತನಾಗಿರುವ ನನ್ನ ಸಮಸ್ತ ಭಯವನ್ನು ಪರಿಹರಿಸಲಿ.

ಪ್ರತಿವಾದಿಗಳ ಮೇಲೆ ಜಯ ಸಿದ್ಧಿ

ಶ್ಲೋಕ–12: ಪ್ರತಿವಾದಿಜಯಸ್ವಾಂತಭೇದಚಿಹ್ನಾದರೋ ಗುರುಃ ।
ಸರ್ವವಿದ್ಯಾಪ್ರವೀಣೋಽನ್ಯೋ ರಾಘವೇಂದ್ರಾನ್ನ ವಿದ್ಯತೇ ।

ಪ್ರತಿಪದಾರ್ಥ

ಪ್ರತಿವಾದಿ = ಪರವಾದಿಗಳ, ಜಯ = ಗೆಲವು, ಪ್ರತಿಸ್ಪರ್ಧಿಗಳ ಸೋಲು, ಸ್ವಾಂತ = ಮನಸ್ಸಿನ, ಭೇದ = ಸೀಳುವಿಕೆ ಅಥವಾ ಚಾಂಚಲ್ಯ, ಚಿಹ್ನ = ಲಕ್ಷಣ, ಆದರಃ = ಆದರವುಳ್ಳವರು, ಸರ್ವವಿದ್ಯಾಪ್ರವೀಣ = ಸಮಸ್ತ ಶಾಸ್ತ್ರಗಳಲ್ಲಿ ನಿಪುಣರಾದವರು, ರಾಘವೇಂದ್ರಾತ್ = ಶ್ರೀ ರಾಘವೇಂದ್ರ ಗುರುಗಳಿಗಿಂತ, ಅನ್ಯಃ = ಬೇರೆಯವರು, ನ ವಿದ್ಯತೇ = ಇರುವುದಿಲ್ಲ.

Vishesha Sangraha

ಅನುವಾದ : ಶ್ರೀ ರಾಘವೇಂದ್ರತೀರ್ಥರು ಪ್ರತಿವಾದಿಗಳನ್ನು ಜಯಿಸುವುದರಲ್ಲಿ ಪ್ರವೀಣರಾದವರು. ಪ್ರತಿವಾದಿಗಳ ಮನಸ್ಸಿನಲ್ಲಿ ಸೋಲಿನ ಚಿಹ್ನೆ ಮೂಡಿಸುವಲ್ಲಿ ಸಮರ್ಥರಾದವರು. ಸಕಲವಿದ್ಯಾ ಪಾರಂಗತರಾದವರು. ಶ್ರೀ ರಾಘವೇಂದ್ರ ಸ್ವಾಮಿಗಳವರನ್ನು ಬಿಟ್ಟರೆ ಬೇರೆಯಾವ ಗುರುಗಳೂ ಇಲ್ಲ.

ಅಪರೋಕ್ಷಜ್ಞಾನ ಸಿದ್ಧಿ

ಶ್ಲೋಕ–13: ಅಪರೋಕ್ಷೀಕೃತಶ್ರೀಶಃ ಸಮುಪೇಕ್ಷಿತಭಾವಜಃ ।
ಅಪೇಕ್ಷಿತಪ್ರದಾತಾऽನ್ಯೋ ರಾಘವೇಂದ್ರಾನ್ನ ವಿದ್ಯತೆ ।

ಪ್ರತಿಪದಾರ್ಥ

ಅಪರೋಕ್ಷೀಕೃತ = ಪ್ರತ್ಯಕ್ಷಮಾಡಿಕೊಂಡ, ಶ್ರೀಶಃ = ಲಕ್ಷ್ಮೀಪತಿಯುಳ್ಳವರು, ಸಮುಪೇಕ್ಷಿತ ಭಾವಜಃ = ಕಾಮವನ್ನು ಉಪೇಕ್ಷೆ ಮಾಡಿದವರು, ಅಪೇಕ್ಷಿತಪ್ರದಾತಾ = ಎಲ್ಲರಿಗೂ ಇಷ್ಟವಾದುದನ್ನು ಅನುಗ್ರಹಿಸುವರು, ರಾಘವೇಂದ್ರಾನ್ನ ವಿದ್ಯತೇ = ರಾಘವೇಂದ್ರರ ಹೊರತು ಇನ್ನೊಬ್ಬರಿಲ್ಲ.

ಅನುವಾದ : ಶ್ರೀ ರಾಘವೇಂದ್ರ ಗುರುಗಳು ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ ಸಾಕ್ಷಾತ್ಕಾರ ಪಡೆದವರು. ಜಿತೇಂದ್ರಿಯರಾಗಿದ್ದು ಮನ್ಮಥವಿಕಾರಕ್ಕೆ ಒಳಗಾಗದವರು. ಭಕ್ತರ ಸಮಸ್ತ ಅಭಿಲಾಷೆಗಳನ್ನು ಸಂಪೂರ್ಣವಾಗಿ ಕೊಡುವುದರಲ್ಲಿ ಅತ್ಯಂತ ಸಮರ್ಥರು. ಶ್ರೀ ರಾಘವೇಂದ್ರಸ್ವಾಮಿಗಳವರನ್ನು ಬಿಟ್ಟರೆ ಇಂತಹವರು ಮತ್ತೊಬ್ಬರಿಲ್ಲ.

Vishesha Sangraha

ವೈರಾಗ್ಯ ವಾಕ್ಪಟುತ್ವ ಸಿದ್ಧಿ

ಶ್ಲೋಕ–14: ದಯಾದಾಕ್ಷಿಣ್ಯ ವೈರಾಗ್ಯ ವಾಕ್ಪಾಟವಮುಖಾಂಕಿತಃ ।
ಶಾಪಾನುಗ್ರಹಶಕ್ತೋಽನ್ಯೋ ರಾಘವೇಂದ್ರಾನ್ನ ವಿದ್ಯತೇ ।

ಪ್ರತಿಪದಾರ್ಥ

ದಯಾ = ಕರುಣೆ, ದಾಕ್ಷಿಣ್ಯ = ಚಾತುರ್ಯ, ವೈರಾಗ್ಯ = ವಿರಕ್ತಿ, ವಾಕ್ಪಟವಂ = ಸಂವಹನ ಸಿದ್ಧಿ, ಅಂಕಿತ = ಈ ಗುಣಗಳಿಗೆ ಖ್ಯಾತರಾದವರು, ಶಾಪಾನುಗ್ರಹಶಕ್ತಃ = ತಪ್ಪು ಮಾಡಿದವರಿಗೆ ಶಾಪನೀಡುವ ಸಾಮರ್ಥ್ಯ, ಅನ್ಯಃ = ಮತ್ತೊಬ್ಬರು, ರಾಘವೇಂದ್ರಾನ್ನ ವಿದ್ಯತೇ = ಗುರು ರಾಘವೇಂದ್ರರೊಬ್ಬರೇ ವಿನಃ ಮತ್ತೊಬ್ಬರಿಲ್ಲ.

ಅನುವಾದ : ಭಕ್ತರಲ್ಲಿ ಯಾವ ಫಲಾಪೇಕ್ಷೆಯೂ ಇಲ್ಲದೆ ದಯೆ ತೋರುವುದರಲ್ಲಿ, ಭಕ್ತರ ಇಷ್ಟಾನುಸಾರ ನಡೆದುಕೊಳ್ಳುವುದರಲ್ಲಿ, ಪ್ರಾಪಂಚಿಕ ವಿಷಯದಲ್ಲಿರುವ ವಿರಕ್ತಿಯಲ್ಲಿ, ಮಾತಿನ ಚಾತುರ್ಯದಲ್ಲಿ ದುಷ್ಟರಿಗೆ ಶಾಪಕೊಡುವುದರಲ್ಲಿಯೂ ಹಾಗೂ ಶಿಷ್ಟರಿಗೆ, ಭಕ್ತರಿಗೆ ಅನುಗ್ರಹ ಮಾಡುವುದರಲ್ಲಿಯೂ ಅಥವಾ ಬೇರೆಯವರು ಕೊಟ್ಟ ಶಾಪದಿಂದ ಮೋಚನೆ ಮಾಡಿಸಿ ಅನುಗ್ರಹ ಮಾಡುವುದರಲ್ಲಿಯೂ, ಶ್ರೀ ರಾಘವೇಂದ್ರ ಗುರುಗಳನ್ನು ಬಿಟ್ಟರೆ ಮತ್ತೊಬ್ಬರು ಸಿಗುವುದಿಲ್ಲ.

ಎಲ್ಲಾ ರೋಗ ರುಜಿನಗಳ ನಾಶ

ಶ್ಲೋಕ–15: ಅಜ್ಞಾನ ವಿಸ್ಮೃತಿ ಭ್ರಾಂತಿ ಸಂಶಯಾಪಸ್ಮೃತಿಕ್ಷಯಾಃ ।
ತಂದ್ರಾಕಂಪವಚಃಕೌಂಠ್ಯಮುಖಾ ಯೇ ಚೇಂದ್ರಿಯೋದ್ಭವಾಃ ।
ದೋಷಾಸ್ತೇ ನಾಶಮಾಯಾಂತಿ ರಾಘವೇಂದ್ರಪ್ರಸಾದತಃ ।

Vishesha Sangraha

ಪ್ರತಿಪದಾರ್ಥ

ಅಜ್ಞಾನ = ಜ್ಞಾನಾಭಾವ, ವಿಸ್ಮೃತಿ = ಮರೆವು, ಸ್ಮರಣ ಹೀನತೆ, ಭ್ರಾಂತಿ = ತಪ್ಪು ತಿಳುವಳಿಕೆ, ಸಂಶಯ = ಇದೋ ಅದೋ ಎಂಬ ಸಂದೇಹ, ಅಪಸ್ಮೃತಿ = ಅಪಸ್ಮಾರರೊಗ, ಕ್ಷಯ = ರಾಜಯಕ್ಷ್ಮರೋಗ, ತಂದ್ರಾ = ಮೂರ್ಛಾರೋಗ, ಕಂಪ = ದೇಹದಲ್ಲಿ ಚಂಚಲತೆ, ಅಂಗಾಂಗಗಳಲ್ಲಿ ಕಂಪನ, ವಚಃಕೌಂಠ್ಯ = ತೊದಲು ಮಾತುಗಳು, ಯೇ ಚ = ಮತ್ತಿತರ, ಇಂದ್ರಿಯೋದ್ಭವಾಃ = ಇಂದ್ರಿಯ ಜನ್ಯ ಸಮಸ್ಯೆಗಳು, ದೊಷಾಸ್ತೇ = ಈ ಎಲ್ಲ ರೋಗಗಳು, ರಾಘವೇಂದ್ರ ಪ್ರಸಾದತಃ = ರಾಘವೇಂದ್ರ ಗುರುಗಳ ಅನುಗ್ರಹದಿಂದ, ನಾಶಂ = ಕೊನೆ, ಆಯಾಂತಿ = ಹೊಂದುತ್ತವೆ.

ಅನುವಾದ : ಮಂಕುತನ, ಮರೆವು, ಒಂದು ಪದಾರ್ಥವನ್ನು ನೋಡಿ ಮತ್ತೊಂದನ್ನಾಗಿ ತಿಳಿಯುವಿಕೆಯೆಂಬ ಭ್ರಾಂತಿಯು, ಇದೋ ಅದೋ ಎಂಬ ಸಂದೇಹವು, ಅಪಸ್ಮಾರ, ಕ್ಷಯ, ತೂಕಡಿಸುವ ಜಾಡ್ಯ, ಅದಿರು ವಾಯು, ಬಿಕ್ಕಲು, ಇವೇ ಮೊದಲಾದ ಇಂದ್ರಿಯಗಳಿಂದ ಉಂಟಾಗುವ ಸಮಸ್ತ ರೋಗೋಪದ್ರವಗಳು ಶ್ರೀ ರಾಘವೇಂದ್ರಸ್ವಾಮಿಗಳ ಪರಮಾನುಗ್ರಹದಿಂದ ನಿಮಿಷ ಮಾತ್ರದಲ್ಲಿ ನಾಶವಾಗುತ್ತದೆ. ಆದುದರಿಂದಲೇ ಈ ಮಹಾನುಭಾವರಾದ ಶ್ರೀ ರಾಘವೇಂದ್ರ ಯತಿವರ್ಯರಿಗಿಂತಲೂ ಮಹಿಮೋಪೇತರಾದ ಗುರುಗಳು ಮತ್ತೊಬ್ಬರಿಲ್ಲ.

ಸರ್ವ ಸಿದ್ಧಿಗೆ ರಾಯರ ಅಷ್ಟಾಕ್ಷರ ಮಂತ್ರ ಜಪ

ಶ್ಲೋಕ–16: "ಶ್ರೀ ರಾಘವೇಂದ್ರಾಯ ನಮಃ" ಇತ್ಯಷ್ಟಾಕ್ಷರ

ಮಂತ್ರತಃ ಜಪಿತಾದ್ಭಾವಿತಾನ್ನಿತ್ಯಂ ಇಷ್ಟಾರ್ಥಾಃ ಸ್ಯುರ್ನಸಂಶಯಃ ।

Vishesha Sangraha

ಪ್ರತಿಪದಾರ್ಥ

ಶ್ರೀ ರಾಘವೇಂದ್ರಾಯನಮಃ ಇತ್ಯಾಷ್ಟಾಕ್ಷರ ಮಂತ್ರತಃ = ಶ್ರೀ ರಾಘವೇಂದ್ರಾಯನಮಃ ಎಂಬ ಅಷ್ಟಾಕ್ಷರ ಮಂತ್ರವು, ಜಪಿತಾತ್= ಜಪಿಸಿದಲ್ಲಿ, ಭಾವಿತಾಃ = ಭಕ್ತಿಯಿಂದ ಸ್ಮರಿಸಿದಲ್ಲಿ, ನಿತ್ಯಂ=ಪ್ರತಿನಿತ್ಯವೂ, ಇಷ್ಟಾರ್ಥಾಃ = ಇಷ್ಟಾರ್ಥಗಳು, ಸ್ಯುಃ = ಈಡೇರಿಸಲ್ಪಡುತ್ತವೆ, ನ ಸಂಶಯಃ = ಸಂಶಯಕ್ಕೆ ಆಸ್ಪದವೇ ಇಲ್ಲ.

ಅನುವಾದ : "ಶ್ರೀ ರಾಘವೇಂದ್ರಾಯನಮಃ" ಈ ಅಷ್ಟಾಕ್ಷರ ಮಂತ್ರವನ್ನು ಯಾವಾಗಲೂ ಅರ್ಥಾನುಸಂಧಾನ ಸಹಿತವಾದ ಪರಮಭಕ್ತಿಯಿಂದ ಜಪ ಮಾಡತಕ್ಕದವರಿಗೆ ಅವರ ಮನಸ್ಸಿನ ಅಭಿಲಾಷೆಗಳೆಲ್ಲವೂ ಜಾಗ್ರತೆಯಾಗಿಯೇ ಸಿದ್ಧಿಸುತ್ತವೆ, ಸಂಶಯವಿಲ್ಲ.

ರಾಯರಲ್ಲಿ ಚತುರ್ವಿಧ ಪುರುಷಾರ್ಥಗಳ ಪ್ರಾಪ್ತಿಗೆ ಪ್ರಾರ್ಥನೆ

ಶ್ಲೋಕ–17: ಹಂತು ನಃ ಕಾಯಜಾನ್ ದೋಷಾನ್

ಆತ್ಮಾತ್ಮೀಯ ಸಮುದ್ಭವಾನ್ ।

ಸರ್ವಾನಪಿ ಪುಮರ್ಥಾಂಶ್ಚ ದದಾತು ಗುರುರಾತ್ಮವಿತ್ ।

ಪ್ರತಿಪದಾರ್ಥ

ಗುರು = ಶ್ರೀ ರಾಘವೇಂದ್ರ ಗುರುಗಳು, ಆತ್ಮವಿತ್ = ಪರಮಾತ್ಮನನ್ನು ಅರಿತ, ಹಂತು = ನಿವಾರಿಸು, ನಃ = ನಮ್ಮ, ಕಾಯಜಾನ್ = ಶರೀರದಿಂದ ಹುಟ್ಟುವ, ದೋಷಾನ್ = ಸಮಸ್ಯೆಗಳನ್ನು ಪರಿಹರಿಸು, ಆತ್ಮಾತ್ಮೀಯ = ತನ್ನ ಸಂಬಂಧಿಕರಿಂದ ಹಾಗೂ ತನ್ನಿಂದ, ಸಮುದ್ಭವಾನ್ = ಹುಟ್ಟುವ, ಸರ್ವಾನಪಿ = ಎಲ್ಲಾ, ಪುಮರ್ಥಾಂಶ್ಚ = ಧರ್ಮ, ಅರ್ಥ, ಕಾಮ, ಮೋಕ್ಷಗಳು, ದದಾತು=ಕೊಡಲಿ,

Vishesha Sangraha

ಅನುವಾದ : ಪರಮಾತ್ಮನ ಜ್ಞಾನವನ್ನು ಪಡೆದವರಾದ ಶ್ರೀ ರಾಘವೇಂದ್ರ ಗುರುಗಳು ನಮ್ಮ ಶರೀರದಿಂದ ಉತ್ಪನ್ನವಾದ ಹಾಗೂ ತನ್ನಿಂದ ಮತ್ತು ತನ್ನವರಿಂದ ಉತ್ಪನ್ನವಾಗುವ ಸಮಸ್ತ ದೋಷಗಳನ್ನೆಲ್ಲ ನಾಶ ಮಾಡಲಿ, ಹಾಗೂ ನಮಗೆ ಎಲ್ಲಾ ಪುರುಷಾರ್ಥಗಳನ್ನೂ ಕೂಡ ದಯಪಾಲಿಸುವವರು ಆಗಲಿ.

ಇಹ ಪರಲೋಕಗಳಲ್ಲಿ ಸುಖ ಸಮೃದ್ಧಿ

ಶ್ಲೋಕ–18: ಇತಿ ಕಾಲತ್ರಯೇ ನಿತ್ಯಂ ಪ್ರಾರ್ಥನಾಂ ಯಃ ಕರೋತಿ ಸಃ

ಇಹಾಮುತ್ರಾಪ್ತಸರ್ವೇಷ್ಟೋ ಮೋದತೇ ನಾತ್ರ ಸಂಶಯಃ ॥

ಪ್ರತಿಪದಾರ್ಥ

ಇತಿ = ಹೀಗೆ, ಕಾಲತ್ರಯೇ = ತ್ರಿಕಾಲಗಳಲ್ಲಿ, ಮೂರು ಸಂಧ್ಯೆಗಳಲ್ಲಿ, ನಿತ್ಯಂ = ಪ್ರತಿದಿನ, ಪ್ರಾರ್ಥನಾಂ = ಪ್ರಾರ್ಥನೆಯನ್ನು, ಯಃ ಕರೋತಿ = ಮಾಡುವವನು, ಇಹ = ಈ ಲೋಕದಲ್ಲಿ, ಅಮುತ್ರ = ಪರಲೋಕದಲ್ಲೂ, ಆಪ್ತ = ಪ್ರಾಪ್ತವಾದ, ಇಷ್ಟ = ಅಭೀಷ್ಟವುಳ್ಳವನಾಗಿ, ಮೋದತೇ = ಸಂತುಷ್ಟನಾಗುತ್ತಾನೆ, ನಾತ್ರ = ಈ ವಿಷಯದಲ್ಲಿ, ನ ಸಂಶಯಃ = ಅನುಮಾನವೇ ಬೇಡ.

ಅನುವಾದ : ಈ ಮೇಲೆ ಹೇಳಿದ ರೀತಿಯಲ್ಲಿ ಯಾರು ಪ್ರತಿನಿತ್ಯವೂ, ಮೂರು ಕಾಲದಲ್ಲಿ – ಪ್ರಾತಃ, ಮಧ್ಯಾಹ್ನ ಹಾಗು ಸಾಯಂಕಾಲ ಶ್ರೀ ರಾಘವೇಂದ್ರತೀರ್ಥರ ಪ್ರಾರ್ಥನೆಯನ್ನು ಮಾಡುತ್ತಾರೆಯೋ, ಅವರು ಈ ಜಗತ್ತಿನಲ್ಲಿ ಹಾಗು ಪರಲೋಕದಲ್ಲಿಯೂ, ತಮ್ಮ ಸಮಸ್ತ ಅಭೀಷ್ಟಗಳನ್ನು ಪಡೆದವರಾಗಿ, ಆನಂದದಿಂದ ಇರುತ್ತಾರೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

Vishesha Sangraha

ಆತ್ಮ ಸಂರಕ್ಷಣೆ

ಶ್ಲೋಕ–19: ಅಗಮ್ಯಮಹಿಮಾ ಲೋಕೇ ರಾಘವೇಂದ್ರೋ ಮಹಾಯಶಾಃ

ಶ್ರೀಮಧ್ವಮತದುಗ್ಧಾಬ್ಧಿ ಚಂದ್ರೋऽವತು ಸದಾऽನಘಃ ॥

ಪ್ರತಿಪದಾರ್ಥ

ಲೋಕೇ = ಭೂಮಿಯಲ್ಲಿ, ಅಗಮ್ಯ = ಜ್ಞೇಯವಲ್ಲದ, ಮಹಿಮಾ = ಮಹಿಮೆಯುಳ್ಳವರು, ಮಹಾಯಶಾಃ = ವಿಸ್ತೃತವಾದ ಕೀರ್ತಿಯುಳ್ಳ, ಶ್ರೀಮಧ್ವ ಮತ = ಶ್ರೀಮಧ್ವಾಚಾರ್ಯರ ತತ್ವ ಸಿದ್ಧಾಂತ, ದುಗ್ಧಾಬ್ಧಿ=ಕ್ಷೀರಸಮುದ್ರದಿಂದ ಜನಿಸಿದ, ಚಂದ್ರ = ಚಂದ್ರನಂತೆ ಅಭಿವೃದ್ಧಿ ಉಂಟು ಮಾಡುವ, ಸದಾ= ನಿರಂತರವಾಗಿ, ಅನಘಃ = ಚ್ಯುತಿರಹಿತ, ಕಲೆಯಿಲ್ಲದ, ರಾಘವೇಂದ್ರಃ = ರಾಘವೇಂದ್ರರು, ಅವತು = ರಕ್ಷಿಸಲಿ.

ಅನುವಾದ : ಅತ್ಯಂತ ದೊಡ್ಡದಾದ ಯಶಸ್ಸಿನಿಂದ ಭೂಷಿತರಾದ, ಶ್ರೀ ರಾಘವೇಂದ್ರಸ್ವಾಮಿಗಳ ಮಹಿಮೆ ಈ ಲೋಕದಲ್ಲಿ ಬಹಳವೇ ಅಗಾಧವೂ, ಅಗಮ್ಯವೂ ಆಗಿದೆ. ಶ್ರೀ ರಾಘವೇಂದ್ರಸ್ವಾಮಿಗಳು ಶ್ರೀಮಧ್ವಮತವೆಂಬ ಕ್ಷೀರ ಸಮುದ್ರಕ್ಕೆ ಚಂದ್ರನಂತೆ ಇರುತ್ತಾರೆ, ಅಂದರೆ ಇವರಿಂದಾಗಿ ಶ್ರೀಮಧ್ವಮತವು ಚಂದ್ರನಿಂದ ಕ್ಷೀರಸಾಗರವು ಉಕ್ಕೇರಿ ಬರುವಂತೆ, ಸರ್ವತ್ರ ವಿಸ್ತಾರವಾಗಿ ಪ್ರಸೃತವಾಗುತ್ತದೆ. ಶ್ರೀ ರಾಘವೇಂದ್ರಸ್ವಾಮಿಗಳು ಯಾವ ತರಹದ ದೋಷಗಳಿಲ್ಲದವರೂ, ಪಾಪಲೇಶವಿಲ್ಲದವರೂ ಆಗಿದ್ದಾರೆ. ಇಂತಹ ಶ್ರೀ ರಾಘವೇಂದ್ರ ಸ್ವಾಮಿಗಳು ಯಾವಾಗಲೂ ನಮ್ಮ ರಕ್ಷಣೆ ಮಾಡುವವರು ಆಗಲಿ.

Vishesha Sangraha

ರಾಯರ ಬೃಂದಾವನ ಪ್ರದಕ್ಷಿಣೆ, ಪಾದೋದಕದ ಮಹಿಮೆ

ಶ್ಲೋಕ–20: ಸರ್ವಯಾತ್ರಾಫಲಾವಾಪ್ತ್ಯೈ

ಯಥಾಶಕ್ತಿ ಪ್ರದಕ್ಷಿಣಮ್ ।

ಕರೋಮಿ ತವ ಸಿದ್ಧಸ್ಯ ಬೃಂದಾವನಗತಂ ಜಲಮ್ ।

ಶಿರಸಾ ಧಾರಯಾಮ್ಯದ್ಯ ಸರ್ವತೀರ್ಥಫಲಾಪ್ತಯೇ ॥

ಪ್ರತಿಪದಾರ್ಥ

ಸರ್ವಯಾತ್ರಾಫಲ = ಸಕಲ ಕ್ಷೇತ್ರಗಳ ಯಾತ್ರಾಫಲದ, ಅವಾಪ್ತ್ಯೈ= ಪ್ರಾಪ್ತಿಗೋಸ್ಕರ, ಯಥಾಶಕ್ತಿ = ಶಕ್ತಿ ಇದ್ದಷ್ಟು, ಪ್ರದಕ್ಷಿಣಂ= ಪ್ರದಕ್ಷಿಣೆ ನಮಸ್ಕಾರವನ್ನು, ಕರೋಮಿ = ಮಾಡುತ್ತೇನೆ, ಸಿದ್ಧಸ್ಯ = ಜ್ಞಾನ ಸಿದ್ಧಿ ಪಡೆದ, ತವ = ನಿಮ್ಮ, ವೃಂದಾವನಗತಂ = ವೃಂದಾವನಕ್ಕೆ ಅಭಿಷೇಕ ಮಾಡಿದ, ಜಲಂ = ನೀರು, ಸರ್ವತೀರ್ಥ ಫಲಾಪ್ತಯೇ= ಸಕಲ ತೀರ್ಥಗಳಲ್ಲಿ ಸ್ನಾನಮಾಡುವುದರಿಂದ ದೊರಕುವ ಫಲದಂತಹ ಫಲಪ್ರಾಪ್ತಿಗಾಗಿ, ಶಿರಸಾ = ತಲೆ, ಅದ್ಯ = ಈಗ, ಧಾರಯಾಮಿ = ಧಾರಣೆ ಮಾಡುತ್ತೇನೆ.

ಅನುವಾದ : ಸಮಸ್ತ ಉತ್ತಮಕ್ಷೇತ್ರಗಳ ಯಾತ್ರೆಗಳಿಂದ ಉಂಟಾಗುವ ಪುಣ್ಯಫಲದ ಪ್ರಾಪ್ತಿಗೋಸ್ಕರ ತಪೋಜ್ಞಾನ ಸಿದ್ಧರಾದ ತಮ್ಮ ವೃಂದಾವನವನ್ನು ಯಥಾಶಕ್ತಿ ಪ್ರದಕ್ಷಿಣೆ ಮಾಡುತ್ತೇನೆ. ಗಂಗಾದಿ ಮಹಾತೀರ್ಥಗಳಲ್ಲಿ ಸ್ನಾನ ಮಾಡಿ, ತೀರ್ಥಪಾನ ಮಾಡುವುದರಿಂದ ಲಭಿಸುವ ಪುಣ್ಯಫಲದ ಪ್ರಾಪ್ತಿಗಾಗಿ ತಮ್ಮ ವೃಂದಾವನಕ್ಕೆ ಅಭಿಷಿಕ್ತವಾದ ದಿವ್ಯ ತೀರ್ಥವನ್ನು ಭಕ್ತಿನಮ್ರವಾದ ಶಿರಸ್ಸಿನಿಂದ ಧರಿಸುತ್ತೇನೆ.

Vishesha Sangraha

ನಮಸ್ಕಾರ ಹಾಗೂ ಸಂಕೀರ್ತನೆ ಮಹಿಮೆ

ಶ್ಲೋಕ–21: ಸರ್ವಾಭೀಷ್ಟಾರ್ಥಸಿದ್ಧ್ಯರ್ಥಂ ನಮಸ್ಕಾರಂ ಕರೋಮ್ಯಹಮ್ ।

ತವ ಸಂಕೀರ್ತನಂ ವೇದಶಾಸ್ತ್ರಾರ್ಥಜ್ಞಾನಸಿದ್ಧಯೇ ॥

ಪ್ರತಿಪದಾರ್ಥ

ಸರ್ವ = ಸಕಲ ವಿಧವಾದ, ಆಭೀಷ್ಟ = ಅಭೀಪ್ಸಿತವಾದ ವಿಷಯಗಳ, ಸಿದ್ಧ್ಯರ್ಥಂ = ಪ್ರಾಪ್ತಿಗೋಸ್ಕರ, ನಮಸ್ಕಾರಂ = ನಮಸ್ಕಾರವನ್ನು, ಕರೋಮಿ = ಮಾಡುತ್ತೇನೆ, ತವ = ನಿಮ್ಮ, ಅಹಂ = ನಾನು, ಸಂಕೀರ್ತನಂ= ನಾಮೋಚ್ಚಾರಣೆ, ವೇದ = ಚತುರ್ವೇದಗಳು, ಶಾಸ್ತ್ರ =ಬ್ರಹ್ಮಮೀಮಾಂಸಾದಿ ಶಾಸ್ತ್ರ, ಅರ್ಥ= ಪ್ರತಿಪಾದ್ಯ ವಿಷಯ, ಜ್ಞಾನ= ತಿಳುವಳಿಕೆ, ಸಿದ್ಧಯೇ = ಸಿದ್ಧಿಗಾಗಿ ಇರುವುದು.

ಅನುವಾದ: ನಮ್ಮ ಸಕಲ ಮನೋರಥದ ಸಿದ್ಧಿಗಾಗಿ ತಮಗೆ ಭಕ್ತಿಯಿಂದ ವಂದನೆ ಮಾಡುತ್ತೇನೆ. ಸಮಸ್ತ ವೇದಶಾಸ್ತ್ರಗಳ ಅರ್ಥ ಜ್ಞಾನದ ಪ್ರಾಪ್ತಿಗಾಗಿ ನಿರಂತರ ತಮ್ಮ ನಾಮಸಂಕೀರ್ತನ ಮಾಡುತ್ತೇನೆ.

ಗುರುರಾಜಲ್ಲಿ ಘೋರ ಸಂಸಾರ ದುಃಖ ಪರಿಹಾರಕ್ಕಾಗಿ ಪ್ರಾರ್ಥನೆ

ಶ್ಲೋಕ–22: ಸಂಸಾರೇಽಕ್ಷಯಸಾಗರೇ ಪ್ರಕೃತಿತೋಽಗಾಧೇ ಸದಾ ದುಸ್ತರೇ

ಸರ್ವಾವದ್ಯಜಲಗ್ರಹೈರನುಪಮೈಃ ಕಾಮಾದಿಭಂಗಾಕುಲೇ ।

ನಾನಾವಿಭ್ರಮದುರ್ಭ್ರಮೇಽಮಿತಭಯಸ್ತೋಮಾದಿಫೇನೋತ್ಕಟೇ

ದುಃಖೋತ್ಕೃಷ್ಟವಿಷೇ ಸಮುದ್ಧರ ಗುರೋ ಮಾ ಮಗ್ನರೂಪಂ ಸದಾ ॥

Vishesha Sangraha

ಪ್ರತಿಪದಾರ್ಥ

ಅಕ್ಷಯ = ಕೊನೆಯಿಲ್ಲದ, ಸಾಗರೇ = ಸಮುದ್ರ, ಪ್ರಕೃತಿತೊ = ಸ್ವಭಾವ, ಅಗಾಧೇ = ತಳವನ್ನು ಮುಟ್ಟಲು ಸಾಧ್ಯವಾದ, ಸದಾ = ಯಾವಾಗಲೂ, ದುಸ್ತರೇ = ಅತಿಕಠಿಣ, ಸರ್ವಾವದ್ಯ = ಅಪಾಯಕರ ಸಾಗರ ಜೀವಿಗಳು, ಅನುಪಮ = ಅಸದೃಶವಾದ, ಸರ್ವ = ಎಲ್ಲ, ಅವದ್ಯ = ದೋಷ, ಜಲಗ್ರಹ = ಜಲಪಿಶಾಚಿಗಳಿಂದ ಅಸದೃಶವಾದ, ಕಾಮಾದಿ ಬಯಕೆಗಳು, ಕ್ರೋಧ ಮುಂತಾದ ಅರಿಷಡ್ವರ್ಗ, ಭಂಗ = ತೆರೆ, ಅಕುಲೇ = ವ್ಯಾಪ್ತವಾದ, ನಾನಾ = ಅನೇಕ, ವಿಭ್ರಮ = ಸ್ತ್ರೀಯರ ವಿಲಾಸ, ದುರ್ಭ್ರಮೇ = ದುಷ್ಟವಾದ ಭ್ರಮಗಳುಳ್ಳ, ಅಮಿತ = ಮಿತಿರಹಿತ, ಭಯ = ಭೀತಿ, ಸ್ತೋಮ = ಸಮೂಹ, ಫೇನ = ಸಮುದ್ರದ ನೊರೆ, ಉತ್ಕಟೇ = ಉತ್ಕೃಷ್ಟ, ಅಕ್ಷಯಸಾಗರೇ = ಬತ್ತಿಹೋಗದ ಸಮುದ್ರದಂತಿರುವ, ಮಗ್ನರೂಪಂ = ಪ್ರಾಯಃ ಮುಳುಗಿದ ನನ್ನನ್ನು, ಸಂಸಾರೇ = ಸಂಸಾರದಲ್ಲಿ, ಸಮುದ್ಧರ = ಚೆನ್ನಾಗಿ ಮೇಲಕ್ಕೆ ಎಬ್ಬಿಸಿ.

ಅನುವಾದ : ನಾನಾ ದೋಷಗಳೆಂಬ ಅಪಾರ ಕ್ರೂರ ಜಂತುಗಳಿಂದ ಒಡಗೂಡಿ ದಪ್ಪವಾದ ಅಲೆಗಳಿಂದ ತುಂಬಿತುಳುಕುತ್ತಿರುವ, ಅನರ್ಥಕಾರಿಗಳಾದ ನಾನಾ ಭ್ರಾಂತಿವಿಲಾಸಗಳೆಂಬ ಸುಳಿಗಳಿಂದ ಸಹಿತವಾಗಿ ಬಗೆಬಗೆಯಾದ ಭಯಗಳೆಂಬ ನೊರೆಗಳಿಂದ ಉಕ್ಕುತ್ತಾ ದುಃಖಗಳೆಂಬ ತೀಕ್ಷ್ಣವಾದ ವಿಷಜಲಗಳಿಂದ ದುಸ್ತರವಾಗಿಯೂ ಅಸಹ್ಯವಾಗಿಯೂ ಇರುವ ಅಪಾರವಾದ ಸಂಸಾರವೆಂಬ ಮಹಾಸಮುದ್ರದಲ್ಲಿ ಮುಳುಗಿಹೋಗುತ್ತಿರುವ ನನ್ನನ್ನು ಎಲೈ ಸದ್ಗುರುವರೇಣ್ಯರೇ ಕೃಪೆಯಿಂದ ಉದ್ಧಾರ ಮಾಡಿರಿ.

Vishesha Sangraha

ಭಕ್ತಿಯಿಂದ ಪಠಿಸಿದರೆ ಯಾವುದೇ ರೋಗದ ಪರಿಹಾರ

ಶ್ಲೋಕ–23: ರಾಘವೇಂದ್ರಗುರುಸ್ತೋತ್ರಂ ಯಃ ಪಠೇತ್ ಭಕ್ತಿಪೂರ್ವಕಮ್ ।

ತಸ್ಯ ಕುಷ್ಠಾದಿರೋಗಾಣಾಂ ನಿವೃತ್ತಿಸ್ತ್ವರಯಾ ಭವೇತ್ ॥

ಪ್ರತಿಪದಾರ್ಥ :

ಯಃ = ಯಾರು, ಭಕ್ತಿಪೂರ್ವಕಂ =ಭಕ್ತಿಪೂರ್ವಕವಾಗಿ, ರಾಘವೇಂದ್ರ ಗುರುಸ್ತೋತ್ರಂ = ರಾಘವೇಂದ್ರ ಗುರುಗಳ ಸ್ತೋತ್ರವನ್ನು ಪಠೇತ್ = ಪಠನ ಮಾಡುತ್ತಾರೋ, ತಸ್ಯ = ಅವರಿಗೆ, ತ್ವರಯಾ = ಶೀಘ್ರವಾಗಿ, ಕುಷ್ಠಾದಿ ರೋಗಾಣಾಂ = ಕುಷ್ಠ ಮೊದಲಾದ ರೋಗಗಳು, ನಿವೃತ್ತಿಃ = ನಿವೃತ್ತಿಯು, ಭವೇತ್ = ಆಗುತ್ತದೆ.

ಅನುವಾದ : ಯಾವ ಮನುಷ್ಯನು ಪ್ರತಿದಿನವೂ ಶ್ರೀ ರಾಘವೇಂದ್ರ ಗುರುಸ್ತೋತ್ರವನ್ನು ಅವರ ಮಹಿಮೆಯನ್ನು ತಿಳಿದು ಭಕ್ತಿಯಿಂದ ಪಾರಾಯಣ ಮಾಡುತ್ತಾನೋ ಅಂತಹವನ ಕುಷ್ಠಾದಿ ಸಮಸ್ತ ರೋಗಾದಿಗಳು ಪರಿಹಾರವಾಗಿ ಅವನು ಸಂಪತ್ಸಮೃದ್ಧನಾಗುತ್ತಾನೆ.

ಅಂಧತ್ವ ಮೂಕತ್ವ ನಿವಾರಣೆ ಪೂರ್ಣಾಯುಷ್ಯಕ್ಕಾಗಿ ಪ್ರಾರ್ಥನೆ

ಶ್ಲೋಕ–24: ಅಂಧೋಽಪಿ ದಿವ್ಯದೃಷ್ಟಿಃಸ್ಯಾದೇಡಮೂಕೋಽಪಿ ವಾಕ್ಪತಿಃ । ಪೂರ್ಣಾಯುಃ ಪೂರ್ಣಸಂಪತ್ತಿಃ ಸ್ತೋತ್ರಸ್ಯಾಸ್ಯ ಜಪಾದ್ಭವೇತ್ ॥

ಪ್ರತಿಪದಾರ್ಥ :

ಅಂಧೋಪಿ = ಕುರುಡನೂ, ದಿವ್ಯದೃಷ್ಟಿಃ ಸ್ಯಾತ್ = ದೈವೀ ದೃಷ್ಟಿ ಹೊಂದುವನು, ಏಡಮೂಕೋಪಿ = ಹುಟ್ಟಿನಿಂದ ಮೂಕ, ವಾಕ್ಪತಿ = ಅತ್ಯಂತ ವಾಗ್ಮಿ, ಪೂರ್ಣಾಯುಃ = ಪೂರ್ಣ ಆಯುಸ್ಸು, ಪೂರ್ಣ ಸಂಪತ್ತಿಃ = ಬಯಸಿದೆಲ್ಲ ಐಶ್ವರ್ಯ, ಅಸ್ಯ = ಈ ಸ್ತೋತ್ರದ, ಜಪಾತ್ = ಜಪದ ದೆಸೆ, ಭವೇತ್ = ಸಿದ್ದಿಸುವುದು.

Vishesha Sangraha

ಅನುವಾದ : ಈ ಗುರುಸ್ತೋತ್ರದ ಪಠಣದ ಫಲವಾಗಿ ಕುರುಡನಾದವನೂ ಕೂಡ ದಿವ್ಯವಾದ ದೃಷ್ಟಿಯನ್ನು ಪಡೆದವನು ಆಗುತ್ತಾನೆ. ಹುಟ್ಟು ಮೂಕನಾದವನೂ ಕೂಡ ಮಾತಾಡುವುದರಲ್ಲಿ ಅತ್ಯಂತ ಚತುರನಾಗುತ್ತಾನೆ. ಇದಲ್ಲದೆ, ಈ ಸ್ತೋತ್ರದ ನಿತ್ಯ ಪಠಣ ಮಾಡುವವನು, ಪೂರ್ಣವಾದ ಆಯಷ್ಯವುಳ್ಳವನೂ, ಪೂರ್ಣವಾದ ಸಂಪತ್ತುಳ್ಳವನೂ ಆಗುತ್ತಾನೆ.

ಉದರ ದೋಷ ನಾಶ

ಶ್ಲೋಕ–25: ಯಃ ಪಿಬೇಜ್ಜಲಮೇತೇನ

ಸ್ತೋತ್ರೇಣೈವಾಭಿಮಂತ್ರಿತಮ್ ।

ತಸ್ಯ ಕುಕ್ಷಿಗತಾ ದೋಷಾಃ ಸರ್ವೇ ನಶ್ಯಂತಿ ತತ್‌ಕ್ಷಣಾತ್ ॥

ಪ್ರತಿಪದಾರ್ಥ :

ಯಃ = ಯಾರು, ಏತೇನ = ಈ ಸ್ತೋತ್ರದಿಂದ, ಅಭಿಮಂತ್ರಿತಂ = ಚೆನ್ನಾಗಿ ಅಭಿಮಂತ್ರಿತವಾದ, ಜಲಂ = ನೀರನ್ನು, ಪಿಬೇತ್ = ಕುಡಿಯುವನೋ, ತಸ್ಯ = ಅವನ, ಕುಕ್ಷಿಗತಾಃ = ಹೊಟ್ಟೆಯಲ್ಲಿ ಇರುವ, ದೋಷಾಃ = ಗುಲ್ಮವ್ಯಾಧಿ ಮುಂತಾದ ರೋಗಗಳು, ತತ್ ಕ್ಷಣಾತ್ = ಆ ಕ್ಷಣದಲ್ಲಿ, ನಶ್ಯಂತಿ = ನಾಶವಾಗುತ್ತದೆ.

ಅನುವಾದ: ಈ ಮೇಲೆ ಹೇಳಿದ ಗುರುಸ್ತೋತ್ರವನ್ನು ಏಕಾಗ್ರತೆಯಿಂದ ಪಾರಾಯಣ ಮಾಡಿ, ಅಭಿಮಂತ್ರಿಸಿದ ಜಲವನ್ನು ಪಾನಮಾಡಿದರೆ ಕೂಡಲೇ ಅಂತಹವನ ಉದರದಲ್ಲಿರುವ ಎಲ್ಲಾ ರೋಗಾದ್ಯುಪದ್ರವಗಳು ಪರಿಹಾರ ಹೊಂದುತ್ತವೆ.

ದಿವ್ಯಾಂಗರಿಗೆ ವಿಶೇಷ ಶಕ್ತಿ ಬರುತ್ತದೆ

ಶ್ಲೋಕ–26: ಯದ್ವೃಂದಾವನಮಾಸಾದ್ಯ ಪಂಗುಃ

ಖಂಜೋಽಪಿ ವಾ ಜನಃ।

ಸ್ತೋತ್ರೇಣಾನೇನ ಯಃ ಕುರ್ಯಾತ್ ಪ್ರದಕ್ಷಿಣನಮಸ್ಕೃತೀ ॥

ಸ ಜಂಘಾಲೋ ಭವೇದೇವ ಗುರುರಾಜಪ್ರಸಾದತಃ ॥

ಪ್ರತಿಪದಾರ್ಥ :

ಯದ್ = ಯಾರ, ಬೃಂದಾವನಮ್ = ಬೃಂದಾವನವನ್ನು, ಆಸಾದ್ಯ = ಸಮೀಪವೇ, ಪಂಗುಃ = ಕಾಲಿಲ್ಲದೇ ಇರುವ, ಖಂಜೋಪಿ = ಒಂದು ಕಾಲು ಇರುವ ಮನುಷ್ಯ, ಅನೇನ = ಈ, ಸ್ತೋತ್ರೇಣ = ಗುರು ಸ್ತೋತ್ರದಿಂದ, ಗುರುರಾಜ ಪ್ರಸಾದತಃ = ಶ್ರೀ ರಾಘವೇಂದ್ರರ ಅನುಗ್ರಹದಿಂದ, ಪ್ರದಕ್ಷಿಣ ನಮಸ್ಕೃತೀಃ = ಪ್ರದಕ್ಷಿಣೆ ಹಾಗೂ ನಮಸ್ಕಾರಗಳನ್ನು, ಕರೋತಿ = ಮಾಡುತ್ತಾನೋ, ಸಃ = ಅವನು, ಜಂಘಾಲಃ = ಶೀಘ್ರವಾಗಿ ನಡೆಯುವ ಕಾಲುಳ್ಳ, ಭವೇತ್ = ಆಗುವನು, ಏವ = ನಿಶ್ಚಯ.

ಅನುವಾದ : ಎರಡೂ ಕಾಲುಗಳಿಲ್ಲದ ಹೆಳವನು (ಪಂಗು), ಕಣಕಾಲುಗಳಿಲ್ಲದವನು (ಹೆಳವನು), ಒಂದು ಕಾಲಿಲ್ಲದ ಕುಂಟನು ಯಾವನೇ ಆಗಲಿ ಶ್ರೀ ರಾಘವೇಂದ್ರಸ್ವಾಮಿಗಳವರ ವೃಂದಾವನವನ್ನು ಹೊಂದಿ ಭಕ್ತಿಪೂರ್ವಕವಾಗಿ ಈ ಸ್ತೋತ್ರವನ್ನು ಪಾರಾಯಣ ಮಾಡುತ್ತಾ, ಯಥಾಶಕ್ತಿ ಪ್ರದಕ್ಷಿಣ ನಮಸ್ಕಾರಾದಿಗಳನ್ನು ಮಾಡಿದರೆ (ಮಾಡಿಸಿದರೆ) ಅವನು ಗುರುಗಳ ಅನುಗ್ರಹದಿಂದ ವೇಗವಾಗಿ ಲಕ್ಷಣವಾಗಿ ನಡೆಯತಕ್ಕ ಶಕ್ತಿವುಳ್ಳವನಾಗುತ್ತಾನೆ.

Vishesha Sangraha
Vishesha Sangraha

ಭೂತ, ಪ್ರೇತ, ಪಿಶಾಚಾದಿ ಪೀಡಾ ಪರಿಹಾರ

ಶ್ಲೋಕ–27: ಸೋಮಸೂರ್ಯೋಪರಾಗೇ ಚ

ಪುಷ್ಯಾರ್ಕಾದಿಸಮಾಗಮೇ

ಯೋಽನುತ್ತಮಮಿದಂ ಸ್ತೋತ್ರಮಷ್ಟೋತ್ತರಶತಂ ಜಪೇತ್ ।

ಭೂತಪ್ರೇತಪಿಶಾಚಾದಿಪೀಡಾ ತಸ್ಯ ನ ಜಾಯತೇ ॥

ಪ್ರತಿಪದಾರ್ಥ :

ಸೋಮಸೂರ್ಯೋಪರಾಗೇ = ಚಂದ್ರ ಹಾಗೂ ಸೂರ್ಯ ಗ್ರಹಣದಲ್ಲಿ, ಚ = ಮತ್ತು, ಸ ಪುಷ್ಯಾರ್ಕಾದಿಸಮಾಗಮೇ = ಪುಷ್ಯಾ ನಕ್ಷತ್ರ ಮತ್ತು ಭಾನುವಾರ ಯೋಗ, ಯಃ ಅನುತ್ತಮಮ್ ಇದಮ್ = ಅತ್ಯಂತ ಉತ್ತಮವಾದ ಸ್ತೋತ್ರವನ್ನು, ಅಷ್ಟೋತ್ತರಶತಮ್ = ನೂರೆಂಟು ಬಾರಿ, ಜಪೇತ್ = ಜಪಿಸುವವರೊ, ತಸ್ಯ = ಅವನಿಗೆ, ಭೂತ, ಪ್ರೇತ, ಪಿಶಾಚಾದಿ, ಪೀಡಾ = ಭೂತಗಳು, ಪ್ರೇತಗಳು, ಪಿಶಾಚಾಗಳ ಪೀಡೆ, ಮುಂತಾದ ದುಷ್ಟಶಕ್ತಿಗಳು, ನ ಜಾಯತೇ = ಉಂಟಾಗುವುದಿಲ್ಲ.

ಅನುವಾದ : ಯಾರಾದರೂ, ಸೂರ್ಯಗ್ರಹಣ, ಚಂದ್ರಗ್ರಹಣಗಳ ಸಂದರ್ಭಗಳಲ್ಲಿ ಹಾಗು ಭಾನುವಾರ ಮತ್ತು ಪುಷ್ಯಾ ನಕ್ಷತ್ರಗಳ ಸಮ್ಮಿಳನದ ಶುಭಮುಹೂರ್ತದಲ್ಲಿ ಹಾಗು ಇತರ ಶುಭಮುಹೂರ್ತಗಳಲ್ಲಿ (ಉದಾ: ಅರ್ಧೋದಯ, ಮಹೋದಯ, ವೈಧೃತೀ, ವ್ಯತೀಪಾತ, ಜನ್ಮ ನಕ್ಷತ್ರ, ಪೂರ್ಣಿಮೆ, ಅಮಾವಾಸ್ಯಾ) ಈ ಅತ್ಯಂತ ಶ್ರೇಷ್ಠವಾದ ಸ್ತೋತ್ರವನ್ನು ಒಂದು ನೂರಾ ಎಂಟು ಸಲ ಪಠಿಸುತ್ತಾರೆಯೋ, ಅಂಥವರಿಗೆ ಯಾವುದೇ ಭೂತ, ಪ್ರೇತ, ಪಿಶಾಚ ಇತ್ಯಾದಿ ದುಷ್ಟ ಶಕ್ತಿಗಳಿಂದ ಯಾವ ಪೀಡೆಯೂ ಆಗುವುದಿಲ್ಲ.

Vishesha Sangraha

ದೀಪ ಬೆಳಗುವುದರಿಂದ ತತ್ವಜ್ಞಾನ, ಪುತ್ರ ಸಂತತಿ

ಶ್ಲೋಕ–28: ಏತತ್ ಸ್ತೋತ್ರಂ ಸಮುಚ್ಚಾರ್ಯ

ಗುರೋರ್ಬೃಂದಾವನಾಂತಿಕೇ । ದೀಪಸಂಯೋಜನಾತ್

ಜ್ಞಾನಂ ಪುತ್ರಲಾಭೋ ಭವೇದ್ ಧ್ರುವಮ್ ॥

ಪ್ರತಿಪದಾರ್ಥ :

ಏತತ್ = ಈ, ಸ್ತೋತ್ರಮ್ = ಸ್ತೋತ್ರವನ್ನು, ಸಮುಚ್ಚಾರ್ಯ = ನಿಖಿರವಾಗಿ ಪಠಿಸಿ, ಗುರೋಃ = ಗುರುಗಳ, ವೃಂದಾವನಾಂತಿಕೇ = ವೃಂದಾವನ ಸಮೀಪದಲ್ಲಿ, ದೀಪಸಂಯೋಜನಾತ್ = ದೀಪವನ್ನು ಹಚ್ಚುವುದರಿಂದ, ಜ್ಞಾನಂ = ಜ್ಞಾನವು, ಪುತ್ರಲಾಭ = ಪುತ್ರಪ್ರಾಪ್ತಿ, ಧ್ರುವಂ = ನಿಶ್ಚಯವಾಗಿ, ಭವೇತ್ = ಆಗುವುದು.

ಅನುವಾದ : ಈ ಅಮೂಲ್ಯವಾದ ಸ್ತೋತ್ರವನ್ನು ಪಾರಾಯಣ ಮಾಡುತ್ತಾ ಶ್ರೀಗುರುಗಳ ಬೃಂದಾವನದ ಬಳಿಯಲ್ಲಿ ಭಕ್ತಿಯಿಂದ ತುಪ್ಪದ ದೀಪವನ್ನು ಹಚ್ಚಿ ಸಮರ್ಪಿಸಿದರೆ ಸಂದೇಹವಿಲ್ಲದೆ ಪುತ್ರಸಂಪತ್ತಿಯುಂಟಾಗುತ್ತದೆ.

ಸರ್ವಾಭಿಷ್ಟಗಳ ಸಿದ್ಧಿ

ಶ್ಲೋಕ–29: ಪರವಾದಿಜಯೋ

ದಿವ್ಯಜ್ಞಾನಭಕ್ತ್ಯಾದಿವರ್ಧನಮ್ ।

ಸರ್ವಾಭೀಷ್ಟಪ್ರವೃದ್ಧಿಃ ಸ್ಯಾತ್ ನಾತ್ರ ಕಾರ್ಯಾ ವಿಚಾರಣಾ ॥

ಪ್ರತಿಪದಾರ್ಥ :

ಪರವಾದಿಜಯಃ = ಪರವಾದಿಗಳನ್ನು ಗೆಲ್ಲುವ ಸಾಮರ್ಥ್ಯ, ದಿವ್ಯ = ದೈವೀ, ಜ್ಞಾನಭಕ್ತ್ಯಾದಿ ವರ್ಧನಮ್ = ಜ್ಞಾನಭಕ್ತಿ ಮುಂತಾದ ಅಭಿವೃದ್ಧಿ, ಸರ್ವ ಅಭೀಷ್ಟ = ಸಕಲ ಕಾಮನೆಗಳು, ಪ್ರವೃದ್ಧಿಃ = ಅತ್ಯಂತ ಅಭಿವೃದ್ಧಿ,

Vishesha Sangraha

ಸ್ಯಾತ್ = ಸಂಭವಿಸುವವು, ಅತ್ರ = ಈ ವಿಷಯದಲ್ಲಿ, ವಿಚಾರಣಾ = ಯಾವುದೇ ವಿಚಾರವು, ನ ಕಾರ್ಯಾ = ಮಾಡತಕ್ಕದಲ್ಲ.

ಅನುವಾದ : ಮೇಲೆ ಹೇಳಿದಂತೆ ಶ್ರೀಗುರುಗಳವರ ಬೃಂದಾವನದ ಬಳಿಯಲ್ಲಿ ದೀಪಾರಾಧನೆಯನ್ನು ಭಕ್ತಿಯಿಂದ ಆಚರಿಸಿದರೆ ಪರವಾದಿಜಯವು ಉಂಟಾಗುತ್ತದೆ. ಶ್ರೀಹರಿವಾಯುಗಳಲ್ಲಿ ಭಕ್ತಿಯನ್ನು ಭಗವಂತನ ಅಪರೋಕ್ಷ ಜ್ಞಾನವು ಸಕಲಪುರುಷಾರ್ಥ ಲಾಭವೂ ನಿಸ್ಸಂದೇಹವಾಗಿ ಉಂಟಾಗುತ್ತದೆ.

ಕಳ್ಳಕಾಕರ ಭಯ ಪರಿಹಾರಕ್ಕಾಗಿ

ಶ್ಲೋಕ–30:

ರಾಜಚೋರಮಹಾವ್ಯಾಘ್ರಸರ್ಪನಕ್ರಾದಿಪೀಡನಮ್ ।

ನ ಜಾಯತೇऽಸ್ಯ ಸ್ತೋತ್ರಸ್ಯ ಪ್ರಭಾವಾನ್ನಾತ್ರ ಸಂಶಯಃ ॥

ಪ್ರತಿಪದಾರ್ಥ :

ಅಸ್ಯ = ಈ, ಸ್ತೋತ್ರಸ್ಯ = ಸ್ತೋತ್ರದ, ಪ್ರಭಾವಾತ್ = ಜಪದ ಸಾಮರ್ಥ್ಯದಿಂದ ಜಪಮಾಡುವವನಿಗೆ, ರಾಜಚೋರಮಹಾವ್ಯಾಘ್ರಸರ್ಪ= ರಾಜಪೀಡೆ, ಕಳ್ಳರ ಪೀಡೆ ದೊಡ್ಡಹುಲಿಗಳ ಪೀಡೆ, ಸರ್ಪಗಳ ಭಯ, ನಕ್ರ = ಹರಿತ ಉಗುರು ಹಾಗೂ ಹಲ್ಲುಗಳಿರುವ, ಅದಿಪೀಡನಮ್ = ಈ ಎಲ್ಲ ಪೀಡೆಗಳು, ನ ಜಾಯತೇ = ಸಂಭವಿಸುವುದಿಲ್ಲ, ಅನ್ಯ = ಇದರ ಪ್ರಭಾವದಿಂದ, ನ ಸಂಶಯ = ಸಂಶಯವೂ ಬೇಡ.

ಅನುವಾದ : ಈ ಸ್ತೋತ್ರವನ್ನು ಪಠಣ ಮಾಡುವ ಪ್ರಭಾವದಿಂದಾಗಿ, ರಾಜರುಗಳ, ಕಳ್ಳರು, ದರೋಡೆಕಾರರು, ಇವರಿಂದ ದೊಡ್ಡ ಹುಲಿ, ಸಿಂಹ, ಕರಡಿ ಇತ್ಯಾದಿ ವನ್ಯಪ್ರಾಣಿಗಳಿಂದ, ಹಾವು ಇತ್ಯಾದಿ ವಿಷಕರ ಪ್ರಾಣಿಗಳಿಂದ, ಮೊಸಳೆ ಇತ್ಯಾದಿಯಾದ ಜಲಚರ ಪ್ರಾಣಿಗಳಿಂದ ಯಾವುದೇ ರೀತಿಯ ಪೀಡೆಯುಂಟಾಗುವುದಿಲ್ಲ. ಈ ವಿಷಯದಲ್ಲಿ ಯಾವ ಸಂಶಯವೂ ಬೇಡ.

Vishesha Sangraha

ಗುರುಸ್ತೋತ್ರದಿಂದ ಲಭಿಸುವ ಫಲಗಳಿಗೆ ಹಯಗ್ರೀವರೇ ಸಾಕ್ಷಿ

ಶ್ಲೋಕ–31: ಯೋ ಭಕ್ತ್ಯಾ ಗುರುರಾಘವೇಂದ್ರ–

ಚರಣದ್ವಂದ್ವಂ ಸ್ಮರನ್ ಯಃ ಪಠೇತ್ ಸ್ತೋತ್ರಂ ದಿವ್ಯಮಿದಂ

ಸದಾ ನ ಹಿ ಭವೇತ್ ತಸ್ಯಾऽಸುಖಂ ಕಿಂಚನ ।

ಕಿಂತ್ವಿಷ್ಟಾರ್ಥ ಸಮೃದ್ಧಿರೇವ ಕಮಲಾನಾಥ

ಪ್ರಸಾದೋದಯಾತ್ ಕೀರ್ತಿರ್ದಿಗ್ವಿದಿತಾ ವಿಭೂತಿರತುಲಾ

"ಸಾಕ್ಷಿ ಹಯಾಸ್ಯೋऽತ್ರಹಿ" ।

ಪ್ರತಿಪದಾರ್ಥ :

ಯೋ = ಯಾರು, ಭಕ್ತ್ಯಾ = ಭಕ್ತಿಯಿಂದ, ಗುರು ರಾಘವೇಂದ್ರ ಚರಣದ್ವಂದ್ವಂ = ರಾಘವೇಂದ್ರ ಗುರುಗಳ ಎರಡು ಪಾದಕಮಲಗಳನ್ನು, ಸ್ಮರನ್ = ಸ್ಮರಣೆ ಮಾಡುತ್ತಾ, ಇದಂ = ಈ ದಿವ್ಯವಾದ ಸ್ತೋತ್ರಮ್ = ಸ್ತೋತ್ರವನ್ನು, ಸದಾ= ಯಾವಾಗಲೂ, ಯಃ ಪಠೇತ್ = ಇದನ್ನು ಪಠಿಸುವರೋ, ತಸ್ಯ = ಅಂತಹ ಭಕ್ತನಿಗೆ, ಕಿಂಚನ = ಸ್ವಲ್ಪ, ಅಸುಖಂ = ದುಃಖ, ನ ಹಿ ಭವೇತ್ = ಉಂಟಾಗುವುದಿಲ್ಲ, ಕಮಲಾ = ಲಕ್ಷ್ಮೀದೇವಿಯ, ನಾಥ = ಸ್ವಾಮಿಯ, ಪ್ರಸಾದ = ಅನುಗ್ರಹದಿಂದ, ಉದಯಾತ್ = ಆವಿರ್ಭಾವ, ದಿಗ್ವಿದಿತಾ = ದಿಕ್ಕುಗಳಲ್ಲಿ ಪ್ರಸಾರವಾದ ಶಾಲಿಯಾದಂತಹ, ಕೀರ್ತಿಃ = ಕೀರ್ತಿಯು, ಅತುಲ= ಅಸದೃಶ, ವಿಭೂತಿಃ = ಐಶ್ವರ್ಯವೂ ಸಹ ಸಿಗುತ್ತದೆ, ಸಾಕ್ಷಿ = ಸಾಕ್ಷಿರೂಪವಾದವರು, ಹಯಾಸ್ಯಃ = ಹಯಗ್ರೀವ ದೇವರು.

Vishesha Sangraha

ಅನುವಾದ : ಯಾರು ಭಕ್ತಿಯಿಂದ ಗುರುಗಳಾದ ಶ್ರೀ ರಾಘವೇಂದ್ರತೀರ್ಥರ ಪಾದಕಮಲಗಳ ಸ್ಮರಣೆ ಮಾಡುತ್ತ, ಈ ದಿವ್ಯವಾದ ಸ್ತೋತ್ರವನ್ನು ಯಾವಾಗಲೂ ಪಠಿಸುವರೋ, ಅವರಿಗೆ ಕಿಂಚಿತ್ತಾದರೂ ಯಾವ ತರಹದ ದುಃಖವು ಆಗುವುದಿಲ್ಲ. ತದ್ವಿರುದ್ಧವಾಗಿ ಲಕ್ಷ್ಮೀಪತಿಯಾದ ನಾರಾಯಣ ಅನುಗ್ರಹ ವುಂಟಾಗುವುದರಿಂದ ಸಕಲ ಇಷ್ಟಾರ್ಥಗಳ ಪ್ರಾಪ್ತಿಯ ಸಮೃದ್ಧಿಯೇ ಆಗುತ್ತದೆ. ಇದಲ್ಲದೆ ಎಲ್ಲ ದಿಕ್ಕುಗಳಲ್ಲಿ ಪ್ರಸೃತವಾದ ಕೀರ್ತಿಯೂ, ಅಸದೃಶವಾದ ಸಂಪದಭಿವೃದ್ಧಿಯೂ ಉಂಟಾಗುತ್ತವೆ. ಈ ವಿಷಯದಲ್ಲಿ ಶ್ರೀ ಹಯಗ್ರೀವದೇವರೇ ಸಾಕ್ಷಿಯಾಗಿದ್ದಾರೆ.

ಇದು ಗುರುರಾಜರ ಅನುಗ್ರಹದಿಂದ
ಶ್ರೀ ಅಪ್ಪಣ್ಣಾಚಾರ್ಯರಿಂದ ರಚಿಸಲ್ಪಟ್ಟಿದೆ

ಶ್ಲೋಕ–32: ಇತಿ ಶ್ರೀ ರಾಘವೇಂದ್ರಾರ್ಯ ಗುರುರಾಜ ಪ್ರಸಾದತಃ
ಕೃತಂ ಸ್ತೋತ್ರಮಿದಂ ಪುಣ್ಯಂ ಶ್ರೀ ಮದ್ಭಿರ್ಹ್ಯಪ್ಪಣಾಭಿಧೈಃ ।

ಪ್ರತಿಪದಾರ್ಥ :

ಇತಿ = ಈ ಪ್ರಕಾರ, ಶ್ರೀ ರಾಘವೇಂದ್ರ ಗುರುರಾಜ ಪ್ರಸಾದತಃ = ಶ್ರೀ ರಾಘವೇಂದ್ರ ಗುರುಗಳ ಅನುಗ್ರಹದಿಂದ, ಶ್ರೀಮದ್ಭಿಃ = ಕಾಂತಿಸಂಪನ್ನರಾದ, ಅಪ್ಪಣ್ಣಾಭಿಧೈಃ = ಅಪ್ಪಣ್ಣಾಚಾರ್ಯರಿಂದ, ಇದಂ = ಈ, ಪುಣ್ಯಂ = ಪುಣ್ಯಕರವಾದ, ಸ್ತೋತ್ರಂ = ಸ್ತೋತ್ರವು, ಕೃತಂ = ಮಾಡಲ್ಪಟ್ಟಿದೆ.

Vishesha Sangraha

ಅನುವಾದ :

ಈ ರೀತಿಯಾಗಿ ಈ ಪುಣ್ಯಕರವಾದ ಸ್ತೋತ್ರವು ಪೂಜ್ಯರಾದ ಶ್ರೀ ರಾಘವೇಂದ್ರತೀರ್ಥರೆಂಬ ಗುರುರಾಜರ ಅನುಗ್ರಹದಿಂದ ಶ್ರೀ ಅಪ್ಪಣ್ಣಾಚಾರ್ಯರೆಂಬ ಕೃತಾರ್ಥರಾದ ವ್ಯಕ್ತಿಗಳಿಂದ ರಚಿಸಲ್ಪಟ್ಟಿದೆ.

ಇತಿ ಶ್ರೀಮದಪ್ಪಣ್ಣಾಚಾರ್ಯ ವಿರಚಿತಂ
ಶ್ರೀ ರಾಘವೇಂದ್ರ ಸ್ತೋತ್ರಂ ಸಂಪೂರ್ಣಂ

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯಚ ।
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥

ಪ್ರತಿಪದಾರ್ಥ :

ಪೂಜ್ಯಾಯ ರಾಘವೇಂದ್ರಾಯ = ಪೂಜಾರ್ಹರಾದ, ಸತ್ಯಧರ್ಮ ರತಾಯಚ = ಆಳವಾಗಿ ಸತ್ಯಧರ್ಮಗಳ ಆಚರಣೆಯಲ್ಲಿ ತೊಡಗಿದವರು, ಭಜತಾಮ್ = ಭಜಿಸಿದವರಿಗೆ, ಕಲ್ಪವೃಕ್ಷಾಯ= ಸ್ವರ್ಗದಲ್ಲಿರುವ ಪವಿತ್ರ ಮರ, ನಮತಾಮ್ = ನಮಿಸಿದರೆ, ಕಾಮಧೇನವೇ = ಸ್ವರ್ಗದಲ್ಲಿದ್ದು ಭಕ್ತರ ಆಭೀಷ್ಟ ಈಡೇರಿಸುವ ಹಸುವಿನಂತೆ ಅನುಗ್ರಹಿಸುವ ರಾಘವೇಂದ್ರ ಸ್ವಾಮಿಗಳಿಗೆ ನಮಸ್ಕಾರಗಳು.

ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೇಂದವೇ ।
ಶ್ರೀ ರಾಘವೇಂದ್ರ ಗುರವೇ ನಮೋಽತ್ಯಂತ ದಯಾಲವೇ ॥

ದುರ್ವಾದಿಗಳೆಂಬ ಕತ್ತಲೆಗೆ ಸೂರ್ಯನಂತೆ ಇರುವ, ವಿಷ್ಣುಭಕ್ತರೆಂಬ ರಾತ್ರಿ ಕಮಲಕ್ಕೆ ಚಂದ್ರನಂತೆ ಇರುವ ಹಾಗೂ ಅತ್ಯಂತ ದಯಾಳುಗಳಾದ ಶ್ರೀ ರಾಘವೇಂದ್ರ ಗುರುಗಳಿಗೆ ನಮಸ್ಕಾರಗಳು.

Vishesha Sangraha